and the matter has been referred to the Law Department for a thorough examination and the same is examined by the Law Department, whether in such cases of appointments the PSC should be consulted or not. After the Law Department opinion is received, a final decision would be taken, till then the Corpora ion has been asked to continue tee services of these teachers.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಮಂತ್ರಿಗಳು ಈ ಉಪಾಧ್ಯಾಯರುಗಳ ಸರ್ವೀಸಸ್‌ನ್ನು ಮುಂದುವರೆಸುವ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ, ಬಹಳ ಸಂತೋಷ. ಅದಕ್ಕಾಗಿ ತಮಗೆ ವಂದನೆಗಳನ್ನರ್ಪಿಸುತ್ತೇನೆ. ಮತ್ತೆ ಈಗ ಕಾರ್ಪೊರೇಷನ್‌ಗೂ ಪಿ. ಎಸ್. ಸಿ. ಆಫೀಸಿಗೂ, ಮತ್ತು ಸರ್ಕಾರಕ್ಕೂ ಏನು ಒಂದು ಕಾಂಟ್ರವರ್ಸಿ ಇದೆ ಅದನ್ನು ಬೇಗ ಇತ್ಯರ್ಥ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಮೊನ್ನೆ ದಿವಸ ಈ ಸೂಪರ್ ಆನ್ಯುಯೇಷನ್ ಕೇಸ್ ಬಗ್ಗೆ ಕಾರ್ಪೊರೇಷನ್ ಮಾಡಿರುವುದು ಸರಿಯಲ್ಲ ಎಂದು ಹೈಕೋರ್ಟಿನವರು ತೀರ್ಮಾನ ಮಾಡಿರುವುದು ಇದೆ. ಮತ್ತೆ ಈ ವಯಸ್ಸಿನ ಮಿತಿಯಲ್ಲಿ ೫೫ ವರ್ಷ ಮತ್ತೆ ೫೮ ವರ್ಷ ಇವೆಲ್ಲಾ ಇದೆ. ಆದುದರಿಂದ ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಿ ಅದೃಷ್ಟ ಬೇಗ ಈ ಒಂದು ಭಿನ್ನಾಭಿಪ್ರಾಯಗಳು ಏನು ಇವೆ ಅದನ್ನು ಇತ್ಯರ್ಥ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಅಲ್ಲದೇ ಈಗಾಗಲೇ ಕೆಲವರು ೧೦ನೇ ತಾರೀಖು ರಿಲೀವ್ ಆಗಬೇಕು ಎಂದು ನೋಟೀಸುಗಳನ್ನು ಕೊಟ್ಟಿರುತ್ತಾರೆಂದು ತಿಳಿದುಬಂದಿದೆ. ಆದುದರಿಂದ ತಕ್ಷಣ ೧೦ನೇ ತಾರೀಖು ಅವರನ್ನು ರಿಲೀವ್ ಮಾಡದಂತೆ ಆದೇಶ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್.— ಈಗ ಕಾನೂನನ್ನು ಸ್ವಲ್ಪ ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗಿದೆ. ಅದು ನಮ್ಮದೇ ಆಗಲಿ, ಕಾರ್ಪೊರೇಷನ್ನಿನದ್ದು ಆಗಲೀ ಯಾವುದೇ ಆಗಲೀ, ಯಾವುದು ಸರಿಯಾಗಿ ಕಾಣುತ್ತದೆ ಅದನ್ನು ಗಮನದಲ್ಲಿಟ್ಟುಕೊಂಡು, ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಈಗಾಗಲೇ ಆಶ್ವಾಸನೆ ಕೊಟ್ಟಿದ್ದೇನೆ. ಮತ್ತು ಈಗಾಗಲೇ ಹೇಳಿಕೆ ಕೊಟ್ಟ ಪ್ರಕಾರ ಕಾರ್ಪೊರೇಷನ್‌ಗೆ ತಿಳಿಸಿದ್ದೇವೆ.

SRI B. B. SAYANAK.—This is a very serious matter.

MADAM SPEAKER.—I know the seriousness, The hon. Member can come and see me in my chamber.

Private Members Resolutions

(i) Re : Constitution of an Expert Committee to study and fix up reasonable rates for the supply of water for drinking and domestic use in Bangalore City.

† ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷಿಣೀಯವರೇ, ಶ್ರೀಮಾನ್ ಶಾಮಣ್ಣನವರು ಈ ವಾಟರ್ ಬೋರ್ಡಿನವರು ಸರಬರಾಜು ಮಾಡುತ್ತಾ ಇರತಕ್ಕ ನೀರಿನ ಒಂದು ದರ ಏನು ಇದೆ, ಆ ದರವನ್ನು ಸರಿಯಾಗಿ ನಿಗದಿ ಮಾಡಲಿಕ್ಕೆ ಒಂದು ತಜ್ಞರ ಸಮಿತಿ ನೇಮಿಸಬೇಕು : ಆ ಸಮಿತಿ ದರವನ್ನು ಪುನರ್‌ಪರಿಶೀಲನೆ ಮಾಡಿ ಸರ್ಕಾರಕ್ಕೆ ಒಂದು ಶಿಫಾರಸ್ಸು ಮಾಡಬೇಕು ಎನ್ನುವ ಖಾಸಗಿ ನಿರ್ಣಯವನ್ನು ಈ ಸದನದಲ್ಲಿ ಮಂಡಿಸಿದ್ದಾರೆ. ಶ್ರೀಮಾನ್ ಶಾಮಣ್ಣನವರು ಮಂಡಿಸಿರತಕ್ಕ ಈ ಖಾಸಗಿ ನಿರ್ಣಯದ ಮೇಲೆ ಮಾನ್ಯ ದೇವೇಗೌಡರು, ಮಾನ್ಯ ಕೃಷ್ಣಾ ಅವರು, ಮತ್ತು ಮಾನ್ಯ ಕೋಣಂದೂರು ಲಿಂಗಪ್ಪನವರು ಹಾಗೂ ಮಾನ್ಯ ನಾಯ್ಡು ಅವರು ಮತ್ತು ಮಾನ್ಯ ಹಮೀದ್ ಷಾ ಅವರು ಹೀಗೆ ಅನೇಕ ಮಾನ್ಯ ಸದಸ್ಯರುಗಳು ತಮ್ಮ ಸೂಚನೆಗಳನ್ನು ವ್ಯಕ್ತಪಡಿಸಿದ್ದಾರೆ. ಅದರಲ್ಲೂ ಮಾನ್ಯ ದೇವೇಗೌಡರು ಮಾನ್ಯ ಕೃಷ್ಣಾ ಅವರು ಮಾನ್ಯ ಶಾಮಣ್ಣನವರು ಇದರ ಬಗ್ಗೆ ಕಟುವಾದ ಟೀಕೆಗಳನ್ನು ಮಾಡಿದ್ದಾರೆ. ಈ ಟೀಕೆಗಳು ಆಧಾರ ರಹಿತವಾಗಿವೆ ಎಂಬುದಕ್ಕೆ ನಾನು ಈ ಸದನದಲ್ಲಿ ಒಂದೆರಡು ಉದಾಹರಣೆಗಳನ್ನು ವ್ಯಕ್ತಪಡಿಸಿದರೆ ಬಹುತೇಕ ನನ್ನ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದಿದ್ದೇನೆ. ಉದಾಹರಣೆಗಾಗಿ ಉಚಿತ ನೀರಿನ ಸೌಲಭ್ಯವನ್ನು ಕೊಡತಕ್ಕಂಥಾದ್ದನ್ನು ಕೊಡದೇ, ಬಡ ಜನರಿಗೆ ಸಲ್ಲತಕ್ಕ ಬೀದಿ ಕೊಳಾಯಿಗಳ ಸೌಲಭ್ಯವನ್ನು ಕಡಿಮೆ ಮಾಡುವುದಕ್ಕೆ ಏನು ಒಂದು ನಿರ್ಣಯ ತೆಗೆದುಕೊಂಡಿದ್ದಾರೆ ಅದು ಖಂಡನೀಯವಾ

ದುದು ಎಂದು ಶ್ರೀಮಾನ್ ದೇವೇಗೌಡರು ಹಾಗೂ ಶ್ರೀಮಾನ್ ಶಾಮಣ್ಣನವರು ಅವರ ಭಾಷಣದಲ್ಲಿ ಹೇಳಿದ್ದಾರೆ. ಈ ವಿಷಯದಲ್ಲಿ ತಮ್ಮ ಮುಂಖೇನ ಸಾದರಪಡಿಸುವುದೇನಂದರೆ, ಮಾನ್ಯ ದೇವೇಗೌಡರು, ಮಾನ್ಯ ಶಾಮಣ್ಣನವರು, ಮಾನ್ಯ ಕೃಷ್ಣ ಅವರು ನಿಜವಾದ ಸ್ಥಿತಿಯ ಅರಿವು ಮಾಡಿಕೊಳ್ಳದೇ ಮಾತನಾಡಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ೨೫ ಸಾವಿರ ಲೀಟರ್ ಉಚಿತ ನೀರಿನ ಸೌಲಭ್ಯ ಏನು ಇದೆ, ಈ ನೀರನ್ನು ಕೊಡಬೇಕಾದ್ದು ವಾಟರ್ ಸಪ್ಲೈ ಬೋರ್ಡಿನವರದಲ್ಲ. ಇದು ಆ ಬೋರ್ಡಿನ ಕಕ್ಷೆಯಲ್ಲಿ ಬರತಕ್ಕದ್ದು ಅಲ್ಲ, ಇದು ಕಾರ್ಪೊರೇಶನ್‌ಗೆ ಒಳಪಟ್ಟದ್ದು ಎಂದು ಹೇಳುತ್ತೇನೆ. ಇದಕ್ಕೆ ಪ್ರತ್ಯೇಕವಾಗಿ ಕಾರ್ಪೊರೇಷನ್ ಅವರೇ ಪೇಮೆಂಟ್ ಮಾಡುವುದು. ಅವರು ತಮ್ಮ ಆಡಳಿತದಲ್ಲಿ ಬರತಕ್ಕ ನ್ಯೂನತೆಗಳಿಗೆ ಅನುಸಾರವಾಗಿ ಅಥವಾ ತೊಂದರೆಗಳಿಗೆ ಅನುಸಾರವಾಗಿ ಎಲ್ಲಿ ನಲ್ಲಿಗಳನ್ನು ತೆಗೆಯಬೇಕು, ಎಲ್ಲಿ ಮುಂದುವರಿಸಬೇಕು ಎನ್ನುವುದನ್ನು ತೀರ್ಮಾನ ಮಾಡಿಕೊಂಡಿದ್ದಾರೆ ವಿನಹ ಈ ವಾಟರ್ ಸಪ್ಲೈ ಬೋರ್ಡಿನವರು ಅಲ್ಲ ಎನ್ನುವುದು ಮಾನ್ಯಸದಸ್ಯರು ಮನ್ನಣೆ ಮಾಡುತ್ತಾರೆ ಎಂದು ನನ್ನ ಅಭಿಪ್ರಾಯ. ಏಕೆಂದರೆ ಮಾನ್ಯ ಸದಸ್ಯರು ಕಟುತರವಾದ ಟೀಕೆಯನ್ನು ಈ ವಾಟರ್ ಸಪ್ಲೈ ಬೋರ್ಡಿಗೆ ಹೊಂದಿಸಿದ್ದಾರೆ. ಈಗ ಈ ಕಾರ್ಪೊರೇಷನ್‌ನವರು ಏನು ಮಾಡಿದ್ದಾರೆ ಎಂದರೆ, ೨೫ ಸಾವಿರ ಲೀಟರ್ ಉಚಿತ ನೀರು ಕೊಡತಕ್ಕದ್ದನ್ನು ಅವರು ಮೊಟಕುಗೊಳಿಸಿಲ್ಲ. ಅದರ ಬಗ್ಗೆ ಮಾನ್ಯ ಶಾಮಣ್ಣನವರು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿಕೊಟ್ಟಾಗ ಹೇಳಿದ್ದೇನೆ. ಮತ್ತೆ ಈ ವಿಷಯದ ಬಗ್ಗೆ ಮಾತನಾಡುತ್ತಾ ಖಂಡನೀಯವಾದುದು ಎಂದು ಹೇಳಿದ್ದಾರೆ. ಅದು ನಿರಾಧಾರವಾದುದು ಎಂದು ಹೇಳುತ್ತೇನೆ. ಅವರು ಯಾವ ಒಂದು ಮಾಹಿತಿಯೂ ಇಲ್ಲದೇ ಈ ವಿಷಯ ಹೇಳಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದೆಂದು ನನ್ನ ಅಭಿಪ್ರಾಯ. ಮತ್ತೆ ಬಡ ಜನರು ವಾಸಮಾಡತಕ್ಕ ಕಡೆಗಳಲ್ಲಿ ಕೊಳಾಯಿಗಳನ್ನು ತೆಗೆಯುತ್ತಿದ್ದಾರೆ ಎಂದು ಹೇಳಿದ್ದಾರೆ, ಮಾನ್ಯ ಸದಸ್ಯರಿಗೆ ನಾನು ಹೇಳುವುದಾದರೆ ಹಾಗೆ ನಾವು ಬಡವರಿಗೆ ಅನುಕೂಲವಾಗಿದ್ದಂಥ ಕೊಳಾಯಿಗಳನ್ನು ತೆಗೆಸಿಲ್ಲ, ಮತ್ತೆ ಕಾರ್ಪೊರೇಷನ್‌ನವರು ಕೂಡ ಅಂತಹ ಕೊಳಾಯಿಗಳನ್ನು ಬಂದ್ ಮಾಡಿಸಿಲ್ಲ. ಇವೊತ್ತಿನ ದಿವಸ ಎಲ್ಲಿ ಅವಶ್ಯಕತೆ ಇದೆ, ಮತ್ತೆ ಕೊಳಚೆ ಪ್ರದೇಶದಲ್ಲಿರತಕ್ಕ ಸ್ಥಳಗಳಲ್ಲಿ, ಬಡಜನತೆ ಇರತಕ್ಕ ಪ್ರದೇಶಗಳಲ್ಲಿ ಕಾರ್ಪೊರೇಷನ್‌ನವರು ಈ ಕೊಳಾಯಿಗಳನ್ನು ತೆಗೆಯುವ ಯತ್ನಕ್ಕೆ ಹೋಗಿಲ್ಲ, ಅಂತಹ ಕಡೆ ಕೊಳಾಯಿಗಳನ್ನು ಹಾಗೆ ಮುಂದುವರಿಸುತ್ತಿದ್ದಾರೆ ಎಂದು ಹೇಳುತ್ತೇನೆ. ಅಲ್ಲದೇ ಈಗ ಎಂತಹ ಕಡೆ ಕೊಳಾಯಿಗಳನ್ನು ತೆಗೆಯಬೇಕು ಎಂದು ಮಾಡಿದ್ದೇವೆ ಎಂದರೆ ಎಲ್ಲಿ ಏರಿಯಾ ಡೆವಲಪ್‌ಮೆಂಟ್ ಆಗಿ, ಮನೆ ಮಾಲೀಕರುಗಳು ನೀರನ್ನು ತೆಗೆದುಕೊಳ್ಳುವ ಯೋಗ್ಯತೆ ಇರುತ್ತದೆ. ಅಂತಹ ಕಡೆ ಕೊಳಾಯಿಗಳನ್ನು ಕೊಡಕೂಡದು ಎಂದು ನಿರ್ಣಯ ಮಾಡಿದೆ. ಇದು ವಾಟರ್ ಸಪ್ಲೈ ಬೋರ್ಡಿನವರು ಒಂದು ಸ್ವಂತ ನಿರ್ಣಯ ಅಲ್ಲ ಎಂದು ಮಾನ್ಯಸದಸ್ಯರಿಗೆ ತಿಳಿಯಬಯಸುತ್ತೇನೆ.

ಇನ್ನು ಒಂದು ಮಹತ್ವದ ವಿಷಯ ಏನು ಎಂದರೆ ಶ್ರೀಮಾನ್ ಕೃಷ್ಣ ಅವರು ಮಾತನಾಡುತ್ತಾ, ಸುಬ್ರಹ್ಮಣ್ಯ ನಗರದಲ್ಲಿ, ಮಲ್ಲೇಶ್ವರದಲ್ಲಿ ಕೂಡ ಕೊಳಾಯಿಗಳನ್ನು ಕಡಿಮೆ ಮಾಡಿದ್ದಾರೆ ಎಂದು ಹೇಳಿದ್ದಾರೆ, ಅಲ್ಲದೇ ಕಾರ್ಪೊರೇಷನ್ ಅಧಿಕಾರ ವರ್ಗದವರು ಸ್ವತಃ ಹೋಗಿ ಜನರ ಕಷ್ಟ ನೋಡಿದಾರೆ. ಒಂದು ವೇಳೆ ಅಂತಹ ಬಡಜನ ಇರತಕ್ಕ ಪ್ರದೇಶದಲ್ಲಿ ಕೊಳಾಯಿಗಳನ್ನು ತೆಗೆದಿದ್ದರೆ ಅಂತಹ ಭಾಗಗಳಲ್ಲಿ ಅವುಗಳನ್ನು ಮುಂದುವರಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಅದನ್ನು ಒಪ್ಪಿಕೊಂಡಿದ್ದಾರೆ. ಯಾವಾಗ ಕಾರ್ಪೊರೇಷನ್ ಅಧಿಕಾರಿಗಳು ಕಮಿಟ್‌ಮೆಂಟ್ ಮಾಡಿಕೊಂಡಿದ್ದಾರೆ ಅದನ್ನು ಸಂಪೂರ್ಣವಾಗಿ ಮಾಡುತ್ತಾರೆ ಎಂದು ಮಾನ್ಯಸದಸ್ಯರು ನಂಬಬೇಕು. ಅಲ್ಲದೆ ಈಗ ನನ್ನ ಒಂದು ತಿಳುವಳಿಕೆ ಮೇರೆಗೆ ಹೇಳುವುದಾದರೆ, ಎಲ್ಲಿ ಬಡ ಜನತೆ ಇದೆ, ಅಂತಹ ಕಡೆ ಕೊಳಾಯಿಗಳನ್ನು ಮುಂದುವರಿಸುತ್ತಾರೆ ; ಇದರ ಬಗ್ಗೆ ಯಾವ ಸಂದೇಹ ಇಲ್ಲ ಎಂದು ಹೇಳುತ್ತೇನೆ. ಮಾನ್ಯ ಕೃಷ್ಣ ಅವರು ಪಬ್ಲಿಕ್ ಟ್ಯಾಪ್ಸ್ ಬಗ್ಗೆ ಹೇಳುತ್ತಾ ೧೯೭೭–೭೮, ೧೯೭೮–೭೯ರಲ್ಲಿ ಕಳುಹಿಸಿದ ನೋಟೀಸ್‌ನಲ್ಲಿ ಅಂಕಿ ಅಂಶ ವ್ಯತ್ಯಾಸ ಇದೆ ಎಂದು ಕಟುವಾಗಿ ಟೀಕಿಸಿದ್ದಾರೆ.

ಇದಕ್ಕೆ ನನ್ನ ಉತ್ತರ ಏನು ಎಂದರೆ, ಈ ಡಿಮಾಂಡುಗಳನ್ನು ಮಾಡುವಾಗ ೬ ತಿಂಗಳಿಗೆ ಒಂದು ಲ ಗೇಜ್ ಕಂಡಕ್ಟ್ ಮಾಡಿ ಆ ಗೇಜುಗಳ ಆಧಾರವನ್ನು ಇಟ್ಟುಕೊಂಡು ಮತ್ತು ಎಷ್ಟರ ಮಟ್ಟಿಗೆ ಉಪಯೋಗ ಆಗಿದೆ ಎನ್ನುವುದನ್ನು ಗಣನೆಗೆ ತೆಗೆದುಕೊಂಡು ತಯಾರು ಮಾಡುವಂಥ ಪರಿಸ್ಥಿತಿ ಇದೆ. ಈ ನಿಯಮ ತಿಳಿದುಕೊಂಡಿದ್ದರೆ ಶ್ರೀಮಾನ್ ಕೃಷ್ಣರವರೂ ಕೂಡ ಈ ರೀತಿಯ ಭಾಷಣವನ್ನು ಮಾಡುತ್ತಿರಲಿಲ್ಲ ಎಂದು ನನ್ನ ಅಭಿಪ್ರಾಯ ಇದೆ. ಶ್ರೀಮಾನ್ ಕೃಷ್ಣರವರು ಮಾಡಿದಂಥ ಈ ಬಗೆಯ ಟೀಕೆ ಕೂಡ ಸತ್ಯಕ್ಕೆ ಬಹುದೂರ, ಸಮಂಜಸವಲ್ಲ ಎಂದು ಸ್ಪಷ್ಟವಾಗಿ ಈ ದಿಸೆಯಲ್ಲಿ ವ್ಯಕ್ತಪಡಿಸುತ್ತೇನೆ. ಮಾನ್ಯ ಸದಸ್ಯರು ಮಾತನಾಡುತ್ತಿರುವಾಗ ನೀರು ಹೆಚ್ಚು ಹೆಚ್ಚಾಗಿ ಸೋರುತ್ತಾ ಹೋಗುತ್ತಿದೆ. ಹೀಗೆ ಅನ್ಯಾಯವಾಗಿ ಹೆಚ್ಚಿನ ನೀರು ಹರಿಯುತ್ತಾ ಇರುವುದನ್ನು ಬಂದ್ ಮಾಡುತ್ತಾ ಇಲ್ಲ ಎಂದು ಹೇಳುತ್ತಾ

ಹೆಚ್ಚಾಗಿ ಹರಿದು ಹೋಗುತ್ತಾ, ಇರುವ ನೀರಿನಿಂದಲೇ ದರಗಳು ಹೆಚ್ಚಿರಬೇಕು ಎನ್ನುವ ರೀತಿಯಲ್ಲಿ ವಾದವನ್ನು ಮುಂದುವರಿಸಿದರು. ಮಾನ್ಯ ಅಧ್ಯಕ್ಷರೇ, ವಾಟರ್ ಸಪ್ಲೈನಲ್ಲಿ ಶೇಕಡ ೨೫ ಮಿನಿಮಮ್ ಲೀಕೇಜ್ ಆಗಲೇ ಬೇಕೆಂದು ತಜ್ಞರ ಅಭಿಪ್ರಾಯ ಇರುತ್ತದೆ ಇದಕ್ಕಿಂತ ಹೆಚ್ಚಾಗಿ ಹೋಗಕೂಡದು, ಕಡಿಮೆ ಹೋಗುವ ಮಟ್ಟಿಗಾದರೂ ಪ್ರಯತ್ನ ಮಾಡುವುದು ಬೋರ್ಡಿನ ಕರ್ತವ್ಯ ಇದೆ, ಅದನ್ನು ಮಾಡುತ್ತಾ ಇದ್ದಾರೆ.

10-30 A.M.

ಶ್ರೀ ಎಚ್.ಡಿ. ದೇವೇಗೌಡ.—ಆ ಬಗ್ಗೆ ಯಾವುದಾದರೂ ತಜ್ಞರ ರಿಪೋರ್ಟ್ ಓದುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಸಾಮಾನ್ಯವಾಗಿ ಶೇಕಡ ೨೫ ಲೀಕೇಜ್ ಇರುತ್ತದೆ. ದೊಡ್ಡ ದೊಡ್ಡ ವಾಟರ್ ಸಪ್ಲೈ ಸ್ಕೀಮ್‌ಗಳನ್ನು ಮಾಡಿ ಅದರಲ್ಲಿ ಲೀಕೇಜ್ ಎಷ್ಟು ಇರುತ್ತದೆ ಎಂದು ತೀರ್ಮಾನ ಮಾಡಿದ್ದಾರೆ. ಅದಕ್ಕೋಸ್ಕರವಾಗಿ ಇಲ್ಲಿಯೂ ಕೂಡ ನನಗೆ ದೊರಕಿದ ಮಾಹಿತಿ ಮೇಲೆ ಹೇಳುವುದಾದರೆ ೨೫ ಕ್ಕಿಂತ ಹೆಚ್ಚಿನ ಪರ್ಸೆಂಟ್‌ನಲ್ಲಿ ಲೀಕ್ ಆಗುತ್ತಗೆ ಎನ್ನುವಂಥ ವರದಿಯಾಗಲೀ ಮಾಹಿತಿಯಾಗಲೀ ನನಗೆ ಇದುವರೆಗೆ ಬಂದಿಲ್ಲ. ಆದುದರಿಂದ ಇದರಿಂದಾಗಿ ದರದಲ್ಲಿ ಒಂದು ಪರಿಣಾಮವಾಗಿದೆ ಎನ್ನುವುದು ಸರಿಯಾದ ವಾದವಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಶೇಕಡ ೨೫ ರಷ್ಟು ಲೀಕೇಜ್ ಇದೆಯೇ ?

ಶ್ರೀ ಡಿ ಕೆ. ನಾಯ್ಕರ್.—ಅಷ್ಟೂ ಇಲ್ಲ, ಅದನ್ನು ಕಡಿಮೆ ಮಾಡಲಿಕ್ಕೆ ಕ್ರಮ ತೆಗೆದುಕೊಂಡಿದ್ದಾರೆ.

SRI T. R. SHAMANNA.—The High Court has stated that there was 40% waste but now there is more than 25 to 28%.

ಶ್ರೀ ಡಿ. ಕೆ. ನಾಯ್ಕರ್,—ಹೈಕೋರ್ಟ್ ಹೇಳಿದ ಮೇಲೆ ನಾವು ಕ್ರಮ ತೆಗೆದುಕೊಂಡದ್ದು ತಮಗೆ ಗೊತ್ತೇ ? ಇದೇ ಸಂದರ್ಭದಲ್ಲಿ ಮಾನ್ಯ ದೇವೇಗೌಡರು ಸಿಬ್ಬಂದಿ ಬಗ್ಗೆ ಒಂದು ವಾದವನ್ನು ಹೇಳಿದ್ದಾರೆ, ಅದೇನೆಂದರೆ ೬೦೦ ಜನ ಡೆಪ್ಯೂಟೆಡ್ ಸ್ಟಾಫ್ ಇನ್ನೂವರೆಗೂ ಕಂಟಿನ್ಯೂ ಆಗಿದೆ. ಅದರಿಂದ ಪ್ರತಿವರ್ಷ ೩೫ ಲಕ್ಷ ರೂಪಾಯಿ ಖರ್ಚಾಗುತ್ತಿದೆ ಎಂದು ಹೇಳಿದ್ದಾರೆ. ಹಾಗೆ ಶ್ರೀ ಹಮೀದ್ ಷಾ ಅವರು ಹಾಗೂ ಶ್ರೀ ಕೃಷ್ಣರವರೂ ಕೂಡ ಸಿಬ್ಬಂದಿ ಹೆಚ್ಚಿಗೆ ಇದೆ ಎನ್ನುವ ವಿಷಯವನ್ನು ಸದನದ ಮುಂದೆ ಇಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ಸಿಬ್ಬಂದಿ ಖರ್ಚು ೧೯೭೩–೭೪ರಲ್ಲಿ ೨೫ ಲಕ್ಷ ಇದ್ದುದು ಈಗ ೭೪–೭೫ರಲ್ಲಿ ೧೮ ಲಕ್ಷಕ್ಕೆ ಬಂದಿದೆ. ೧೮ ಲಕ್ಷಕ್ಕೆ ಬರಬೇಕಾದರೆ ಅದೂ ಜಾಸ್ತಿ ಎಂದು ಹೇಳಬಹುದು. ಇನ್ನು ಕೆಲವು ಬಿಲ್ಸ್ ಫೈನಲೈಸೇಷನ್ ಆಗಿಲ್ಲ, ವರ್ಕ್ ಕಂಪ್ಲೀಟ್ ಆಗುವಂಥಾದ್ದು ಇದೆ ಅದಕ್ಕೋಸ್ಕರ ಹಿಂದಿನ ವರ್ಕನ್ನು ಯಾರು ಮಾಡುತ್ತಾ ಇಲ್ಲಿಯವರೆಗೆ ಬಂದಿದ್ದಾರೋ ಯಾರ ಅವಶ್ಯಕತೆ ಇನ್ನೂ ಇದೆಯೋ ಅವರನ್ನು ಫೈನಲೈಸೇಷನ್ ಆಗುವ ಮಟ್ಟಿಗಾದರೂ ಮುಂದುವರಿಸಬೇಕಾಗುತ್ತದೆ. ವರ್ಕಿನ ಪ್ರೋಗ್ರೆಸ್ಸಿಗಾಗಿ ಅವರು ಅವಶ್ಯಕ ಇದ್ದುದರ ದೆಸೆಯಿಂದ ಅವರನ್ನು ಇಟ್ಟುಕೊಂಡಿದೆಯೇ ಹೊರತಾಗಿ ಅನವಶ್ಯಕವಾಗಿ ಮುಂದುವರಿಸಿದ್ದಾರೆ ಎನ್ನುವ ವಾದ ಸರಿಯಾದುದು ಅಲ್ಲ ಎನ್ನುವಂಥಾದ್ದನ್ನು ಮಾನ್ಯ ಸದಸ್ಯರು ನಂಬಬೇಕು ಎಂದು ನನ್ನ ಕಳಕಳಿ ವಿನಂತಿ.

ಶ್ರೀ ಎಚ್ ಡಿ. ದೇವೇಗೌಡ,—ಡೆಪ್ಯುಟೇಶನ್ ಮೇಲೆ ಎಷ್ಟು ಜನ ಇದ್ದಾರೆ ?

ಶ್ರೀ ಡಿ ಕೆ. ನಾಯ್ಕರ್.—ಇದರ ಜೊತೆಗೆ ಶ್ರೀಮಾನ್ ದೇವೇಗೌಡರು ಎಕ್ಸಿಕ್ಯುಟೀವ್ ಎಂಜಿನಿಯರ್ ಇದ್ದವರು ಇನ್‌ಚಾರ್ಜ್ ಸೂಪರಿಂಟೆಂಡಿಂಗ್ ಎಂಜನಿಯರು ಹಾಗೂ ಜೂನಿಯರು ಎಂಜಿನಿಯರುಗಳು ಇನ್‌ಚಾರ್ಜ್ ಅಸಿಸ್ಟೆಂಟ್ ಇಂಜಿನಿಯರ್ ಹಾಗೂ ಅಸಿಸ್ಟೆಂಟ್ ಇಂಜಿನಿಯರ್ ಇನ್ ಚಾರ್ಜ್ ಎಕ್ಸಿಕ್ಯೂಟೀವ್ ಇಂಜಿನಿಯರು ಆಗಿದ್ದಾರೆಂದು ತಿಳಿಯಪಡಿಸಿದ್ದಾರೆ. ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮಹತ್ವವಾದುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದು ಏನೆಂದರೆ, ಎಕ್ಸಿಕ್ಯೂಟೀವ್ ಇಂಜಿನಿಯರವರಾದ ಶ್ರೀ ಗುಲಾಮ ಮಹ್ಮದ್ ಎನ್ನುವವರು ಇದ್ದಾರೆ ಅವರು ಇಂಥ ಸ್ಕೀಮುಗಳನ್ನು ಇಂಪ್ಲಿಮೆಂಟ್ ಮಾಡುವುದರಲ್ಲಿ ಪರಿಣತರು ಎನ್ನುವ ಹೆಸರು ಪಡೆದಿದ್ದಾರೆ. ಅವರು ಕೆಲಸ ಚೆನ್ನಾಗಿ ಮಾಡುತ್ತಾ ಇದ್ದಾರೆ ಎಂದು ಮೆಚ್ಚಿಗೆ ವ್ಯಕ್ತಪಡಿಸಿದ ಮೇಲೆ, ಅದೇ ತರಹ ಕೆಲಸ ಚೆನ್ನಾಗಿ ಮಾಡಬೇಕೆಂದು, ಮತ್ತು ಕೆಲಸ ಪೂರ್ತಿಗೊಳಿಸಿರುವುದಕ್ಕೋಸ್ಕರ ಈ ಅರೇಂಜ್‌ಮೆಂಟ್‌ನ್ನು ಅಡ್ಮಿನಿಸ್ಟ್ರೇಟೀವ್ ಪರ್ಪಸ್‌ಗಾಗಿ ಮಾಡಿದೆ ಹಾಗೂ ಎಫಿಸಿಯನ್ಸಿ ಮತ್ತು ವರ್ಕಿನ ಪ್ರೋಗ್ರೆಸ್ ಸಲುವಾಗಿ ಇಂತಹ ಜನರನ್ನು ಅಲ್ಲಿ ನೇಮಕ ಮಾಡಿದೆ. ಇದರಿಂದ ಬೋರ್ಡಿಗೆ ಯಾವುದೇ ರೀತಿಯ ನಷ್ಟವಾಗಿದೆ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅಲ್ಲಿ ಮೊದಲು ಸೂಪರಿಂಟೆಂಡಿಂಗ್ ಇಂಜಿನೀಯರ್ ಇದ್ದರು ಮತ್ತು ಅವರು ಚೆನ್ನಾಗಿ ಸೂಪರಿಂಟೆಂಡಿಂಗ್ ಎಂಜನಿಯರ ಕೆಲಸ ಮಾಡುತ್ತಾ ಇದ್ದರು. ಆದರೆ ಅವರು ಇವರಿಗೆ ಮೆಹರ್‌ಬಾನಿ ಮಾಡಲಿಲ್ಲ ಎಂದು ಅವರನ್ನು ಆ ಜಾಗದಲ್ಲಿ ಇನ್‌ಚಾರ್ಜ್ ಆಗಿಟ್ಟರು.

ಶ್ರೀ ಡಿ. ಕೆ. ನಾಯ್ಕರ್. – ಮಾನ್ಯ ದೇವೇಗೌಡರು ಒಂದು ಅಂಶ ತಿಳಿಯಬೇಕು : ಏನೆಂದರೆ, ಒಂದು ವಿಷಯವನ್ನು ನೋಡಬೇಕಾದರೆ ನೋಡುವ ದೃಷ್ಟಿಕೋನ ಸ್ವಲ್ಪ ಬದಲಾವಣೆ ಆಗಬೇಕು

ಶ್ರೀ ಎಚ್. ಡಿ. ದೇವೇಗೌಡ.—ಹಾಗಿದ್ದರೆ ತಮ್ಮ ಗ್ಲಾಸ್ ನನಗೆ ಕೊಡಿ, ನನ್ನ ಗ್ಲಾಸ್ ನಿಮಗೆ ಕೊಡುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್.—ನನ್ನ ಗ್ಲಾಸ್ ಕೊಟ್ಟರೆ ಬೇರೆ ರೀತಿ ಕಾಣುವುದು. ಈಗ ನಾನು ಸ್ಥಿತಿಯನ್ನು ನನಗೆ ತಿಳಿದ ಮಾಹಿತಿ ಮೇಲೆ ಹೇಳುತ್ತೇನೆ. ಮುಖ್ಯವಾಗಿ ಈಗ ಏನು ವ್ಯವಸ್ಥೆ ಇದೆ, ಇದರಿಂದ ಬೋರ್ಡಿಗೆ ಬಹಳ ನಷ್ಟವಾಗಿದೆ ಎಂದು ಹೇಳುವ ವಾದ ಸರಿಯಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಈಗ ಅಲ್ಲಿ ಏನು ನಡೆಯುತ್ತಿದೆ ಎಂದರೆ, ಎಕ್ಸಿಕ್ಯೂಟೀವ್ ಎಂಜಿನಿಯರ್ ಆಗಿ ಶಿಫಾರಸ್ಸು ಮಾಡುತ್ತಾರೆ ನಂತರ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಿ ಅವರೇ ಅದನ್ನು ಅಪ್ರೂವ್ ಮಾಡಿಕೊಳ್ಳುತ್ತಾರೆ. At least he must be relieved from this place......ಅವ್ಯವಹಾರ ಮಾಡುವುದಾದರೆ ಕ್ರಮಬದ್ಧವಾಗಿ ಮಾಡಿ, ಅದು ಮಾಡಲಿಕ್ಕೆ ಬಾರದೇ ಇದ್ದರೆ ಏನು ಮಾಡುವುದು ?

ಶ್ರೀ ಡಿ. ಕೆ. ನಾಯ್ಕರ್.—ಒಮ್ಮೊಮ್ಮೆ ಕೆಲಸದ ಅವಶ್ಯಕತೆಯಿಂದ ಕ್ರಮಬದ್ಧತೆಯನ್ನು ಮೀರಬೇಕಾಗುತ್ತದೆ ಎನ್ನುವುದನ್ನು ತಾವು ತಿಳಿದುಕೊಳ್ಳಬೇಕು. ಎಷ್ಟೋ ಸಲ ಎಕ್ಸ್‌ಪರ್ಟ್ಸ್ ಒಪೀನಿಯನ್ ತೆಗೆದುಕೊಳ್ಳುವಾಗ, ಅವರು ಅನುಭವಸ್ಥರು, ನಂಬಿಕೆಗೆ ಯೋಗ್ಯರೆಂದು ಜನತೆಯ ಮನಸ್ಸಿಗೆ ಬಂದಮೇಲೆ ಅವರ ಅಭಿಪ್ರಾಯ ಪಡೆಯಬೇಕೆಂದು ಎಷ್ಟೋ ಜನರು ಕಾತುರತೆಯಿಂದಿ ಇರುತ್ತಾರೆ,

ಶ್ರೀ ಹೆಚ್. ಡಿ. ದೇವೇಗೌಡ.—ಈಗಿನ ನಿಮ್ಮ ಅಡಿಷನಲ್ ಸೆಕ್ರೆಟರಿ ಅವರು ನಿಮ್ಮ ಮೆಚ್ಚಿಗೆಗೆ ಪಾತ್ರರು ಆಗಿರುವುದರಿಂದ ಅವರು ಯಾವ ಜಾಗದಲ್ಲಿ ಬೇಕಾದರೂ ಇರುತ್ತಾರೆ.

ಶ್ರೀ ಡಿ. ಕೆ ನಾಯ್ಕರ್.—ಇದು ತಮ್ಮ ಅಭಿಪ್ರಾಯ ಇನ್ನು ಪಾರ್ಕುಗಳಿಗೆ ಬೋರ್‌ವೆಲ್ ಹಾಕಿ ನೀರು ಪೂರೈಸಬೇಕಾಗಿತ್ತು, ಕೊಳಾಯಿಯಿಂದ ನೀರು ಕೊಡುವುದರಿಂದ ಖರ್ಚು ಹೆಚ್ಚಿಗೆ ಬರುತ್ತಾ ಇದೆ, ಅದರ ಪರಿಣಾಮವಾಗಿ ದರಗಳನ್ನು ಏರಿಸಿದ್ದಾರೆ ಎನ್ನುವ ವಾದವನ್ನು ಮಾನ್ಯ ಕೃಷ್ಣರವರು ಹೇಳಿದ್ದಾರೆ; ಮಾನ್ಯ ಅಧ್ಯಕ್ಷರೇ, ಇದಕ್ಕೂ ಮೊದಲು ಬೆಂಗಳೂರಿನಲ್ಲಿ ನನಗೆ ದೊರೆತ ಮಾಹಿತಿ ಮೇಲೆ ಬೋರ್‌ವೆಲ್ ತೋಡುವ ಬಗ್ಗೆ ಅನೇಕ ಪ್ರಯತ್ನಗಳನ್ನು ಮಾಡಿ ಅಪಯಶಸ್ಸು ಆಗಿದೆ. ಆದರೂ ಅಂಥ ಕೆಲಸವನ್ನು ಕಾರ್ಪೊರೇಷನ್‌ನವರು ಮುಂದುವರಿಸಬೇಕೆಂಬ ಉದ್ದೇಶದಿಂದ ಮಾರ್ಕೆಟ್ ಹತ್ತಿರ ೩೦ ಸಾವಿರ ರೂಪಾಯಿಗಳನ್ನು ಪ್ರತಿ ವರ್ಷ ಖರ್ಚು ಮಾಡುತ್ತಿದ್ದಾರೆ. ಅದನ್ನು ತಪ್ಪಿಸುವುದಕ್ಕೋಸ್ಕರ, ಬೋರ್‌ವೆಲ್ ಮಾಡುತ್ತಾ ಇದ್ದಾರೆ. ಅದಕ್ಕೆ ಪೈಪನ್ನು ಕೊಡಿಸುವಂಥ ವ್ಯವಸ್ಥೆ ನಡೆದಿದೆ. ಇಂಥ ಕ್ರಮಗಳನ್ನು ಕಾರ್ಪೊರೇಷನ್ ಮೇಲಿಂದ ಮೇಲೆ ತೆಗೆದುಕೊಳ್ಳುವಂಥ ಯೋಚನೆ ಇದೆ ಆದುದರಿಂದ ಇಂಥದ್ದನ್ನು ಕೂಡ ಕಾರ್ಪೊರೇಷನ್ ಮಾಡುತ್ತಾ ಇದೆ ಎಂದು ಈ ಸಮಯದಲ್ಲಿ ವ್ಯಕ್ತಮಾಡುತ್ತೇನೆ.

ಇನ್ನು ನೀರಿನ ದರದ ಬಗ್ಗೆ ಹೇಳಿದರು ನನ್ನ ಒಂದು ಅಭಿಪ್ರಾಯದಲ್ಲಿ ಹೇಳುವುದಾದರೆ, ಈ ಕಾರಣಗಳಿಂದ ದರಗಳನ್ನು ಬದಲಾವಣೆ ಮಾಡುವ ಮಾರ್ಪಾಡು ಮಾಡುವ ಪರಿಸ್ಥಿತಿ ಬರಲಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಈ ಸ್ಕೀಮನ್ನು ಕಾರ್ಯಗತ ಮಾಡುವ ಬಗ್ಗೆ ನಿಧಾನ ಮಾಡಿದ್ದರಿಂದ ಹೆಚ್ಚು ಖರ್ಚಾಗುವುದಕ್ಕೆ ಕಾರಣವಾಯಿತೆಂದು ಮಾನ್ಯ ದೇವೇಗೌಡರು ಮತ್ತು ಇನ್ನಿತರ ಮಾನ್ಯ ಸದಸ್ಯರು ಹೇಳಿ, ಆ ಒಂದು ಭಾರವನ್ನು ಜನತೆಯ ಮೇಲೆ ಹೊರಿಸುವುದು ಸರಿಯಲ್ಲವೆಂದು ಹೇಳಿದ್ದಾರೆ ಮತ್ತು ಮಾನ್ಯ ದೇವೇಗೌಡರ ಅಭಿಪ್ರಾಯ ಏನಿದೆಯೆಂದರೆ ಒಬ್ಬ ಅಧಿಕಾರಿಯ ದುಂದುಕಾರಿಕೆಯ ಆಡಳಿತದಿಂದಾಗಿ ಉಂಟಾದ ಹೊರೆಯನ್ನು ಸರ್ಕಾರ ಮತ್ತು ಬೋರ್ಡಿನವರು ಸೇರಿಕೊಂಡು ಬೆಂಗಳೂರಿನ ಜನತೆಯ ಮೇಲೆ ಹೊರಿಸುವುದಕ್ಕೆ ಹೊರಟಿರುವುದು ಖಂಡನೀಯವಾದುದು ಎಂದು ಹೇಳುತ್ತಾ ಮುಂದುವರೆದು ಅವರು ಏನು ಹೇಳಿದ್ದಾರೆ. ಅದು ಪತ್ರಿಕೆಗಳಲ್ಲಿಯೂ ಸಹ ಇಂದು ಪ್ರಕಟವಾಗಿದೆ ; ಅಧಿಕಾರಿಗಳ ಒಂದು ರಾಸಕ್ರೀಡೆ ಮತ್ತು ರತಿಕ್ರೀಡೆಗೆ ಆದಂಥ ದಂಡು ವೆಚ್ಚವನ್ನು ನಾಗರೀಕರು ಏತಕ್ಕೆ ಕೊಡಬೇಕೆಂದು ಕೇಳಿದ್ದಾರೆ. ಮತ್ತು ಇಂತಹ ಅಧಿಕಾರಿಗಳಿಗೆ ಮುಖ್ಯಮಂತ್ರಿಗಳು ಅಭೇದ್ಯ ರಕ್ಷಣೆಯನ್ನು ಕೊಟ್ಟಿದ್ದಾರೆಂದು ಹೇಳುವ ಮಟ್ಟಕ್ಕೆ ಅವರು ಹೋಗಿದ್ದಾರೆ. ಆದರಲ್ಲಿ ಎಷ್ಟು ವ್ಯತ್ಯಾಸವಿದೆ ಮತ್ತು ಆ ಟೀಕೆಗಳು ಎಷ್ಟು ನಿರಾಧಾರವಾದವುಗಳು ಎಂಬ ಬಗ್ಗೆ ನಾನು ಒಂದೊಂದಾಗಿ ವಿವರಣೆ ಕೊಟ್ಟು ಹೇಳಬಯಸುತ್ತೇನೆ. ಈ ಸ್ಕೀಮನ್ನು ಯಾವ ಹಂತದಲ್ಲಿ ತಯಾರು ಮಾಡಿದರು, ಯಾವ ಯಾವ ರೀತಿಯಲ್ಲಿ ಅದು ಬದಲಾವಣೆ

ಆಗುತ್ತಾ ಹೋಗುತ್ತದೆ ಎಂಬುದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಈ ಯೋಜನೆ ಮೊದಲು ೩೦ ಕೋಟಿ ರೂಪಾಯಿಗಳ ವೆಚ್ಚದ್ದಾಗಿತ್ತು, ನಂತರ ಅದು ೩೬ ಕೋಟಿಗೆ ಹೆಚ್ಚಾಯಿತು ಎಂದು ಹೇಳಿದ್ದಾರೆ. ಇಲ್ಲಿ ರಿವೈಜ ಮಾಡುದ ಪ್ರಸಂಗ ಏತಕ್ಕೆ ಬರುತ್ತದೆಂದರೆ ಸ್ಟೀಲ್ ದರ ಹೆಚ್ಚಾಗಿದ್ದು ಮತ್ತು ಇತರೇ ಸಾಮಾನುಗಳ ದರಗಳು ಹೆಚ್ಚಾಗಿದ್ದು, ಹೋದವರ್ಷ ಇದ್ದ ದರಗಳು ಈ ವರ್ಷವಿರುವುದಿಲ್ಲ, ಸ್ಟೀಲ್ ದರ ಹೋದವರ್ಷ ಏನಿತ್ತು, ಈ ವರ್ಷ ಏನಿದೆ ಎಂಬುದನ್ನು ಮಾನ್ಯ ದೇವೇಗೌಡರೇ ಬೇಕಾದರೆ ಹೇಳಲಿ,

ಶ್ರೀ ಟಿ. ಆರ್. ಶಾಮಣ್ಣ.—ಈ ವರ್ಷ ೮೦೦ ರೂಪಾಯಿಗಳಷ್ಟು ಕಡಿಮೆಯಾಗಿದೆ.

ಶ್ರೀ ಡಿ. ಕ, ನಾಯ್ಕರ್.—ಈ ರೀತಿ ದರಗಳು ಹೆಚ್ಚು ಕಡಿಮೆಯಾಗುತ್ತಿರುವ ಕಾರಣ, ಆ ದರಗಳಿಗೆ ಅನುಗುಣವಾಗಿ ಎಸ್ಟಿಮೇಟ್‌ನ್ನು ಬದಲಾವಣೆ ಮಾಡಬೇಕಾಗುತ್ತದೆ ಈ ರೀತಿ ಮಾಡುತ್ತಿರುವುದು ಇದೇ ಮೊದಲನೆಯ ಸಲವಲ್ಲ. ಅನೇಕ ಸಲ ಮಾಡಲಾಗಿದೆ. ಈ ನೀರಿನ ಸರಬರಾಜಿನ ಬಗ್ಗೆ ಒಂದು ಉದಾಹರಣೆ ಕೊಡಬೇಕೆಂದರೆ, ಮುಡುಗೆರೆಗೆ ನೀರನ್ನು ಸರಹರಾಜು ಮಾಡುವ ಬಗ್ಗೆ ಮೊದಲು ಒಂದೂವರೆ ಲಕ್ಷ ರೂಪಾಯಿಗಳ ಒಂದು ಎಸ್ಟಿಮೇಟ್ ತಯಾರಾಯಿತು, ನಂತರ ಅದು ೩ ಲಕ್ಷಕ್ಕೆ ಹೆಚ್ಚಾಯಿತು, ಅದರ ನಂತರ ಅದು ೬ ಲಕ್ಷವಾಯಿತು, ಅಂದರೆ ಅಧಿಕಾರಿಗಳು ದುಂದುಗಾರಿಕೆ ವೆಚ್ಚ ಮಾಡುತ್ತಾರೆಂದು ಮಾನ್ಯ ಸದಸ್ಯರ ಅಭಿಪ್ರಾಯವೇ ? ಆಯಾ ಕಾಲಕ್ಕೆ ಅನುಗುಣವಾಗಿ, ದರಗಳ ಒಂದು ಆಧಾರದ ಮೇಲೆ ಇದನ್ನು ತೀರ್ಮಾನ ಮಾಡಲಾಗುತ್ತದೆಂಬುದನ್ನು ಮಾನ್ಯ ಸದಸ್ಯರೂ ಒಪ್ಪುತ್ತಾರೆ. ಅದೇರೀತಿ ಇಲ್ಲಿಯೂ ಸಹ ದರದಲ್ಲಿ ಹೆಚ್ಚು ಕಡಿಮೆಯಾಗಿದೆ. ಇಲ್ಲಿ ಆಡಳಿತ ವರ್ಗದ ಒಬ್ಬ ಅಧಿಕಾರಿಯು ಮಾಡಿದಂಥ ದುಂದುವೆಚ್ಚವನ್ನು ಜನರ ಮೇಲೆ ಹೇರುವುದಕ್ಕೆ ಹೊರಟಿರುವುದು ಸರಿಯಲ್ಲ ಎಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದು ಸರಿಯಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಮಾನ್ಯ ಲಕ್ಷ್ಮಣರಾವ್ ಅವರು ನಿವೃತ್ತಿಯಾದಮೇಲೆ ಮಾನ್ಯ ಮುಗ್ದುಂ ಅವರನ್ನು ಟೆಕ್ನಿಕಲ್ ಕಮಿಟಿಯ ಚೇರ್‌ಮನ್ ಆಗಿ ನೇಮಕ ಮಾಡಿದ್ದು ವ್ಯತಿರಿಕ್ತವಲ್ಲವೇ, ಅದು ಉಚಿತವಾಗುತ್ತೇ ಎಂದು ಮಾನ್ಯ ದೇವೇಗೌಡರು ಹೇಳಿ ಅವರಿಗೆ ಮುಖ್ಯಮಂತ್ರಿಗಳ ಸಂರಕ್ಷಣೆ ಇರಬಹುದೆಂದು ಮಾನ್ಯ ಸದಸ್ಯರ ಅಭಿಪ್ರಾಯವಾಗಿದೆ. ಇಲ್ಲಿಯವರೆಗೆ ಯಾರು ಬೋರ್ಡಿನ ಅಧ್ಯಕ್ಷರಾಗಿರುತ್ತಿದ್ದರೋ, ಅವರೇ ಟೆಕ್ನಿಕಲ್ ಕಮಿಟಿಯ ಅಧ್ಯಕ್ಷರಾಗಿರುವುದು ಒಂದು ಪರಿಪಾಟವಾಗಿತ್ತು ಎಂಬುದನ್ನು ಸಹ ಮಾನ್ಯ ಸದಸ್ಯರು ಹೇಳಿದ್ದಾರೆ ಆದರೆ ಈಗ ಅಲ್ಲಿ ಶ್ರೀ ಮುಗ್ದುಂ ಅವರು ಟೆಕ್ನಿಕಲ್ ಕಮಿಟಿಯ ಅಧ್ಯಕ್ಷರಾಗಿರುವುದಕ್ಕೆ ಕಾರಣವೇನೆಂದರೆ, ಇವರು ಟೆಕ್ನಿಕಲ್ ಪರ್ಸನ್ ಆಗಿರುವ ಕಾರಣದಿಂದ ಇವರೇ ಅದರ ಅಧ್ಯಕ್ಷರಾಗಿರುವುದು ಒಳ್ಳೆಯದೆಂದು ಆ ಬೋರ್ಡಿನವರು ಒಂದು ನಿರ್ಣಯ ತೆಗೆದುಕೊಂಡಿದ್ದಾರೆ. ಮಾನ್ಯ ಲಕ್ಷ್ಮಣರಾವ್ ಅವರ ಅಧ್ಯಕ್ಷತೆಯಲ್ಲಿಯೇ ಈ ರೀತಿ ಠರಾವ್ ಮಾಡಿದ್ದಾರೆ. ಮತ್ತು ಈ ಬೋರ್ಡಿಗೆ ಒಂದು ಸ್ವಾಯತ್ತ ಅಧಿಕಾರವಿರುವ ಕಾರಣ......

ಶ್ರೀ ಎಚ್. ಡಿ. ದೇವೇಗೌಡ.—ಈಗ ಅಲ್ಲಿರತಕ್ಕಂಥ ಶ್ರೀ ಕುಲಕರ್ಣಿ ಅವರು ಇಂಜಿನಿಯರ್ ಆಗಿದ್ದಾರೆಯೋ ಅಥವಾ ಗುಮಾಸ್ತರಾಗಿದ್ದಾರೆಯೋ ?

ಶ್ರೀ ಡಿ. ಕೆ. ನಾಯ್ಕರ್.—ಈಗ ಅದರ ಔಚಿತ್ಯವೇನೆಂಬುದನ್ನು ನಾನು ವಿಶದಪಡಿಸುತ್ತಿದ್ದೇನೆ. ಇದರಲ್ಲಿ ಮಾನ್ಯ ಮುಗ್ದುಂ ಅವರ ಕೈವಾಡವಿದೆ ಎಂದು ತಿಳಿದು ಮಾನ್ಯ ದೇವೇಗೌಡರು ಟೀಕೆ ಮಾಡಿದರೆ ಅದು ನನಗೆ ಅರ್ಥವಾಗುವುದಿಲ್ಲ. ಅವರು ವಿಷಯಗಳನ್ನು ಸಂಪೂರ್ಣವಾಗಿ ತಿಳಿದುಕೊಂಡು......

ಶ್ರೀ ಎಚ್. ಡಿ. ದೇವೇಗೌಡ.—ತಾವು ಸ್ವಲ್ಪ ಈಲ್ಡ್ ಆಗುವುದಾದರೆ ಒಂದು ವಿಷಯ ಹೇಳುತ್ತೇನೆ, ಏನೆಂದರೆ, ಈ ಸಭೆಗೆ ಸೇರಿದ ಪಿ. ಯು. ಸಿ. ಕಮಿಟಿಯವರು ಶ್ರೀಮಾನ್ ಕೆ. ಎಚ್. ಪಾಟೀಲ್ ಅವರ ಮೇಲೆ ಒಂದು ನಿರ್ಣಯ ಕೊಟ್ಟರು. ಮಾನ್ಯ ಲಕ್ಷ್ಮಣ್‌ರಾವ್ ಅವರು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅಧ್ಯಕ್ಷರಾಗಿದ್ದಾಗ ಈ ಪ್ರಕರಣದ ಬಗ್ಗೆ ಯಾವ ರೀತಿ ನಡೆದುಕೊಂಡಿದ್ದಾರೆಂಬುದನ್ನು ಅದರಲ್ಲಿ ತಿಳಿಸಿದ್ದಾರೆ. ಈ ಸಂಬಂಧದಲ್ಲಿ ಅವರಿಗೆ ಸರ್ಕಾರದಿಂದ ಫೋನ್ ಹೋದರೆ, ಆ ಅಧಿಕಾರಿ ಅದನ್ನು ಎಷ್ಟರಮಟ್ಟಿಗೆ ರೆಸಿಸ್ಟ್ ಮಾಡುತ್ತಾರೆಂಬುದು ಆ ಪ್ರಕರಣದಿಂದ ನಮಗೆ ತಿಳಿದುಬರುತ್ತದೆ. ಆದರೆ ಇಲ್ಲಿ ಶ್ರೀ ಮುಗ್ದುಂ ಅವರನ್ನು ಟೆಕ್ನಿಕಲ್ ಕಮಿಟಿಯ ಚೇರ್‌ಮನ್ ಮಾಡುವುದಕ್ಕೆ ಶ್ರೀ ಲಕ್ಷ್ಮಣ್ ರಾವ್ ಅವರು ಒಪ್ಪಿಗೆ ಕೊಟ್ಟಿದ್ದಾರೆಂದು ತಾವು ಏನು ಹೇಳಿದಿರಿ, ಅದಕ್ಕೆ ನಾನು ಮೇಲಿನ ಒಂದು ನಿದರ್ಶನವನ್ನು ತಮ್ಮ ಮುಂದೆ ಇಟ್ಟೆ, ಅದು ಒಂದೇ ಉದಾಹರಣೆ ಸಾಕು.

ಶ್ರೀ ಡಿ. ಕೆ. ನಾಯ್ಕರ್.—ನಮ್ಮ ಮುಂದೆ ಈಗ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ವಿಷಯ ಇಲ್ಲ ಈಗ ನಮ್ಮ ಮುಂದಿರುವ ವಿಷಯ ಟೆಕ್ನಿಕಲ್ ಕಮಿಟಿ ಚೇರ್‌ಮನ್ ವಿಷಯ ಆ ಬಗ್ಗೆ ತಾವು ಟೀಕೆ ಮಾಡಿದ್ದರಿಂದ ನಾನು ಉತ್ತರ ಕೊಡುತ್ತಿದ್ದೇನೆ. ಇದರಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಕೈವಾಡವಾಗಲಿಕೆ ಮಾನ್ಯ ಮುಗ್ದುಂ ಅವರ ಕೈವಾಡವಾಗಲೀ ಇಲ್ಲ ಎಂದು ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಮುಂದೆ ಮಾನ್ಯ ದೇವೇಗೌಡರು ತಮ್ಮ ವಾದದಲ್ಲಿ ಈ ಬೋರ್ಡಿನಲ್ಲಿ ಹರಿಜನ ಮತ್ತು ಗಿರಿಜನರಿಗೆ ೧೮ ಪರ್ಸೆಂಟ್ ಮೀಸಲು ಸ್ಥಾನಗಳನ್ನು ಕೊಟ್ಟಿದ್ದಾರೆಯೇ ಎಂದು ಕೇಳಿದ್ದಾರೆ. ಈ ಮಾನ್ಯ ಸಭೆಗೆ ಸೇರಿದ ಹರಿಜನ ಮತ್ತು ಗಿರಿಜನರಿಗೆ ಸೇರಿದಂಥ ಕಮಿಟಿಯವರು ಅಲ್ಲಿಗೆ ಭೇಟಿ ಕೊಟ್ಟು, ತಮ್ಮ ಮೂರನೇ ವರದಿಯಲ್ಲಿ ಕೆಲವು ವಿವರಗಳನ್ನು ಕೊಟ್ಟಿದ್ದಾರೆ ಅದು ತಮ್ಮ ನಜರಿಗೆ ಬಂದಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ ಅವರು ತಮ್ಮ ರಿಪೋರ್ಟಿನಲ್ಲಿ "The committee while appreciating the action taken by the Board in giving due representations to the members of scheduled caste and scheduled tribes wish to observe that representation has not been given in respect of technical posts" ಎಂದು ಹೇಳಿದ್ದಾರೆ. ಟೆಕ್ನಿಕಲ್ ಪೋಸ್ಟ್‌ಗಳನ್ನು ಬಿಟ್ಟು ಉಳಿದ ಪೋಸ್ಟ್‌ಗಳ ಬಗ್ಗೆ ೧೮ ಪರ್ಸೆಂಟ ಮೀಸಲು ಸ್ಥಾನಗಳನ್ನು ಕೊಟ್ಟಿರುವ ಬಗ್ಗೆ ಅವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಅದನ್ನು ತಾವೂ ಸಹ ಒಪ್ಪುತ್ತೀರಿ. ಇನ್ನು ಟೆಕ್ನಿಕಲ್ ಪೋಸ್ಟುಗಳ ಬಗ್ಗೆ ಹೇಳಬೇಕೆಂದರೆ ಸೂಪರಿಂಟೆಂಡಿಂಗ್ ಇಂಜನಿಯರಾಗಲೀ, ಎಕ್ಸಿಕ್ಯುಟೀವ್ ಇಂಜಿನಿಯರಾಗಲೀ, ಅಸಿಸ್ಟೆಂಟ್ ಇಂಜಿನಿಯರ್ ಆಗಲೀ, ಜೂನಿಯರ್ ಇಂಜಿನಿಯರಾಗಲೀ, ಇವರುಗಳು ಅಲ್ಲಿಗೆ ಡೆಪ್ಯುಟೇಷನ್ ಮೇಲೆ ಬಂದಿದ್ದಾರೆ, ಇದರಲ್ಲಿಯೂ ೧೮ ಪರ್ಸೆಂಟ್ ರಿಜರ್ವೇಷನ್ ಕೊಡಬೇಕೆಂದು ಎಲ್ಲಿ ಹೇಳಿದೆ?

ಶ್ರೀ ಎಚ್. ಡಿ. ದೇವೇಗೌಡ.—ಯಾವ ಯಾವ ಕ್ಯಾಟಗರಿಯಲ್ಲಿ ಎಷ್ಟೆಷ್ಟು ಕೊಟ್ಟಿದ್ದಾರೆಂಬುದನ್ನು ಹೇಳಿ?

ಶ್ರೀ ಡಿ. ಕೆ. ನಾಯ್ಕರ್.—ಈ ರಿಪೋರ್ಟನ್ನು ತಾವು ನೋಡಿರಬಹುದು ಅದರಲ್ಲಿ ಏನು ಹೇಳಿದ್ದಾರೆಂಬುದನ್ನು ನಾನು ಈಗ ಓದಿ ಹೇಳಿದೆ.

ಇನ್ನು ಮಾನ್ಯ ದೇವೇಗೌಡರು ಬೈರಸಂದ್ರದಲ್ಲಿ ರಿಸರ್ವಾಯರ್ ಕಟ್ಟಿಸುವ ಬಗ್ಗೆ ಮತ್ತು ಇತರ ಕಡೆಗಳಲ್ಲಿ ರಿಜರ್ ವಾಯಿರ್ ಕಟ್ಟಿಸುವ ಬಗ್ಗೆ ದರಗಳಲ್ಲಿ ಹೆಚ್ಚು ಕಡಿಮೆಯಾಗಿರುವುದಕ್ಕೆ ಕಾರಣವೇನು ಎಂದು ಕೇಳಿದ್ದಾರೆ. ಬೈರಸಂದ್ರದಲ್ಲಿ ೩ ಎಂ. ಜಿ. ಗೆ ೭.೯೦ ಲಕ್ಷ ಕ್ಲೀವೆಲ್ಯಾಂಡ್ ಟೌನ್‌ನಲ್ಲಿ ೩ ಎಂ. ಜಿ. ಗೆ ೧೧.೩೫ ಲಕ್ಷ ಕೆ. ಜಿ. ಟವರ್ ೨ ಎಂ.ಜಿ. ಗೆ ೫.೯೨ ಲಕ್ಷ ಎಂ. ಎನ್. ಕೆ. ಪಾರ್ಕ್ ೨ ಎಂ. ಜಿ ಗೆ ೮.೫೫ ಲಕ್ಷ. ಬುಲ್‌ಟೆಂಪಲ್ ೫ ಎಂ. ಜಿ. ಗೆ ೧೬.೨೫ ಲಕ್ಷ ಎಂದು ವಿವರಗಳನ್ನು ಕೊಟ್ಟು ಅವರು ಹೇಳಿದರು.

ಇದರಲ್ಲಿ ಹೆಚ್ಚು ಕಡಿಮೆಯಾಗಿದೆ. ಆರ್ಬಿಟ್ರರಿಯಾಗಿ ಮ್ಯಾನಿಪುಲೇಟೆಡ್ ಮಾಡಿಕೊಂಡಿದ್ದಾರೆ. ಎಷ್ಟು ಕೆಪಾಸಿಟಿ ಇದೆಯೋ ಅಷ್ಟೇ ವೆಚ್ಚವನ್ನು ತರಬಹುದಾಗಿತ್ತು ಎನ್ನುವುದು ಶ್ರೀಮಾನ್ ದೇವೇಗೌಡರ ಟೀಕೆ. ಮಾನ್ಯ ಅಧ್ಯಕ್ಷರೇ ತಮ್ಮ ಮುಖಾಂತರ ಮಾನ್ಯ ದೇವೇಗೌಡರಿಗೆ ಹೇಳಬಯಸುವುದೇನೆಂದರೆ, ನನಗೆ ಟೆಕ್ನಿಕಲ್ ನಾಲೆಡ್ಜ್ ಇಲ್ಲ. ಆದರೆ ಮಾನ್ಯ ದೇವೇಗೌಡರು ಟೆಕ್ನಿಕಲ್ ನಾಲೆಡ್ಜ್ ಪಡೆದಿದ್ದಾರೆ. ಅವರು ಕಂಟ್ರಾಕ್ಟ್ ಕೂಡ ಮಾಡಿದ್ದಾರೆ ಎನ್ನುವ ವಿಚಾರವನ್ನು ಸಹ ಕೇಳಿದ್ದೇನೆ. ಅದರಲ್ಲಿ ನಾಲೆಡ್ಜ್ ಇದ್ದಂಥ ದೇವೇಗೌಡರೇ ಏತಕ್ಕೆ ಈ ತರಹ ಟೀಕೆ ಮಾಡಿದರು ಎಂದು ನನಗೆ ಆಶ್ಚರ್ಯವಾಗುತ್ತದೆ. ಕೆಪಾಸಿಟಿ ಅಷ್ಟೇ ಇದ್ದರೂ ಕೂಡ ಹಣ ಹೆಚ್ಚು ಕಡಿಮೆ ಏಕೆ ಎಂದು ಕೇಳಿದ್ದಾರೆ. ಇಲ್ಲಿ ಮುಖ್ಯವಾಗಿ ಗ್ರೌಂಡ್ ಲೆವೆಲ್ ಏನು ಇರುತ್ತದೆ ಅದನ್ನು ನೋಡಬೇಕು, ಬುಲ್‌ಟೆಂಪಲ್ ಏರಿಯಾ ತೆಗೆದುಕೊಂಡರೆ ಅಲ್ಲಿ ರಾಕಿ ಟೈಪ್ ಆಫ್ ಗ್ರೌಂಡ್ ಇರುವುದರಿಂದ ಎಕ್ಸ್‌ಕವೇಷನ್‌ಗೆ ಲೇಬರ್ ಖರ್ಚು ಹೆಚ್ಚು ಬೇಕಾಗುತ್ತದೆ. ಎಂ. ಎನ್. ಕೃಷ್ಣರಾವ್ ಪಾರ್ಕ್ ಕಡೆ ನೋಡಿದರೆ ಆ ಜಾಗದ ಕಿಮ್ಮತ್ತು ಹೇರಳವಾಗಿದೆ. ಲ್ಯಾಂಡ್ ಕಾಸ್ಟ್ ಮತ್ತು ಎಕ್ಸಕವೇಷನ್ ಮಾಡತಕ್ಕಂಥ ನೇಚರ್, ರಾಕಿ ಟೈಪ್ ಪ್ಲೇಸ್—ಇವುಗಳ ಆಧಾರದ ಮೇಲೆ ಹೆಚ್ಚು ಹೆಚ್ಚು ಹಣ ಖರ್ಚಾಗುತ್ತದೆ. ಮಾನ್ಯ ದೇವೇಗೌಡರು ಕಂಟ್ರಾಕ್ಟ್ ಕೆಲಸಮಾಡಿ ಅನುಭವ ಇದ್ದರೂ ಇದನ್ನು ಅರಿತುಕೊಳ್ಳದೇ ಇರುವುದಕ್ಕೆ ನನಗೆ ವ್ಯಸನವಾಗುತ್ತದೆ. ಈ ತರಹ ವೆಚ್ಚ ಏನಾಗಿದೆ ಅದು ದುಂದುಗಾರಿಕೆ ವೆಚ್ಚ ಎಂದು ಮಾನ್ಯ ದೇವೇಗೌಡರು ಹೇಳುವುದಾದರೆ ಅದು ತಿರುಳು ಇರಲಾರದಂಥ ವಾದ ಎಂದು ಹೇಳಬಯಸುತ್ತೇನೆ. ಇದಕ್ಕಿಂತ ಹೆಚ್ಚಿಗೆ ಏನೂ ಹೇಳುವುದಕ್ಕೆ ಆಗುವುದಿಲ್ಲ. ಇವುಗಳ ಕೆಲಸಕ್ಕೆ ಟೆಂಡರನ್ನು ಕರೆಯುತ್ತಾರೆ. ಟೆಕ್ನಿಕಲ್ ಕಮಿಟಿಯವರು ಸ್ಕ್ರುಟಿನಿ ಮಾಡುತ್ತಾರೆ. ಪ್ರಪೋಸಲನ್ನು ಬೋರ್ಡಿನಲ್ಲಿ ಇಡುತ್ತಾರೆ. ಬೋರ್ಡಿನಲ್ಲಿ ಅಫಿಷಿಯಲ್ ಮತ್ತು ನಾನ್ ಅಫಿಷಿಯಲ್ ಜನ ಇರುತ್ತಾರೆ. ಇದಕ್ಕೆ ಒಪ್ಪಿಗೆ ಕೊಡುವಂಥ ಸ್ವಾಯತ್ತತೆ ಬೋರ್ಡಿಗೆ ಇದೆ ಎನ್ನುವುದನ್ನು ಮಾನ್ಯ ದೇವೇಗೌಡರು ಮರೆಯಬಾರದು. ಯಾವ ಒಂದು ಬೋರ್ಡಿಗೆ ಸಂಪೂರ್ಣ ಅಧಿಕಾರ ಇದೆ, ಆ ಅಧಿಕಾರದಲ್ಲಿ ಅವರು ಈ ಕೆಲಸವನ್ನು ಅಪ್ರೂವ್ ಮಾಡಿದ್ದಾರೆ. ಮಾನ್ಯ ದೇವೇಗೌಡರು ತಮ್ಮ ವಾದದಲ್ಲಿ ಶ್ರೀ ಮುಗ್ಗುಂ ಅವರೇ ಇದಕ್ಕೆ ಮೂಲಕಾರಣ ಎನ್ನುವ ಮಟ್ಟಿಗೆ ಹೋಗಿದ್ದಾರೆ.

[MR. DEPUTY SPEAKER in the Chair]

ನಾನು ಟೆಕ್ನಿಕಲ್ ಮನುಷ್ಯ ಆಗದೇ ಹೋದರೂ ಅವರು ಹೇಳಿರುವುದನ್ನು ನೋಡಿದರೆ ನಗು ಬರುತ್ತದೆ. ಅದಕ್ಕೆ ಮುಗ್ದಂರವರು ಕಾರಣ ಅಲ್ಲ ಎಂದು ನನ್ನ ಅಭಿಪ್ರಾಯ. ಅದು ಮುಗ್ದುಂ ಅವರು ಒಬ್ಬರೇ ಮಾಡಿದಂಥ ಕೆಲಸ ಅಲ್ಲ. ಅವರು ಛೇರ್ಮನ್ ಆಗಿರಬಹುದು ಆದರೆ ಬೋರ್ಡಿನಲ್ಲಿ ಬೇರೆಯವರು ಇರುತ್ತಾರೆ, ಅವರೆಲ್ಲರೂ ಅಪ್ರೂವ್ ಮಾಡಿದ್ದಾರೆ, ಇದು ಅವರೆಲ್ಲರಿಗೂ ಸಂಬಂಧಪಟ್ಟ ವಿಷಯವೇ ವಿನಾ ಕೇವಲ ಮುಗ್ದುಂ ಅವರೊಬ್ಬರಿಗೇ ಸಂಬಂಧಪಟ್ಟ ವಿಷಯವಲ್ಲ. ಮಾನ್ಯ ದೇವೇಗೌಡರು ಈಗಲಾದರೂ ಇದರ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ ಎಂದು ನನ್ನ ಅಭಿಪ್ರಾಯ. ಅವರು ಇನ್ನು ಕೆಲವು ಐಟಂಗಳನ್ನು ಹೇಳಿದರು, ಪರ್ಸೆಂಟೇಜ್ ವರ್ಕ್ ಟೆಂಡರ್‌ಗಿಂತ ಸೆಂಟ್‌ಪರ್ಸೆಂಟ್ ೩೦೦ ಪರ್ಸೆಂಟ್ ಹೆಚ್ಚು ಕೊಟ್ಟಿದ್ದಾರೆ. ಎಂದು ಹೇಳಿದ್ದಾರೆ ಇಲ್ಲಿಯೂ ಕೂಡ ಪರ್ಸೆಂಟೇಜ್ ಇನ್‌ಕ್ರೀಸ್ ಮಾಡಿ ಕೊಡುವುದು ಇದೆ. ಇದನ್ನೂ ಕೂಡ ಟೆಕ್ನಿಕಲ್ ಕಮಿಟಿ ಮತ್ತು ಬೋರ್ಡ್ ಅಪ್ರೂವ್‌ಮಾಡಿ ಕೊಡುವುದು ಎನ್ನುವ ವಾದವನ್ನು ಮಾನ್ಯ ದೇವೇಗೌಡರು ಒಪ್ಪುತ್ತಾರೆ ಎಂದು ನನ್ನ ಅಭಿಪ್ರಾಯ ಇದು ಒಬ್ಬ ವ್ಯಕ್ತಿಯ ಮೇಲೆ ಬರತಕ್ಕಂಥಾದ್ದು ಅಲ್ಲ. ಆದುದರಿಂದ ಇಂತಹ ಸಂದರ್ಭದಲ್ಲಿ ಯಾರ ಮೇಲೂ ಮಾಡುವಂಥ ಅಪಾದನೆ ಇಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ದೇವೇಗೌಡರು ವೃಷಭಾವತಿ ಬಗ್ಗೆ ಹೇಳಿದರು.

ಶ್ರೀ ಎಚ್. ಡಿ. ದೇವೇಗೌಡ.—ಬುಲ್‌ಟೆಂಪಲ್ ರಿಸರ್ವಾಯರ್ ಬಗ್ಗೆ ಹೇಳಿ. ಬುಲ್‌ಟೆಂಪಲ್ ರಿಸರ್ವಾಯರ್ ೫೯೮೦೦ ಕ್ಯೂಬಿಕ್ ಮೀಟರ್ಸ್ ಇದ್ದಿದ್ದನ್ನು ೧೭೫ಕ್ಕೆ ಇಳಿಸಿಕೊಂಡು ರಾಕಿ ಸಾಯಿಲ್ ಎಂದು ೬೦೦೦ ಕ್ಯೂಬಿಕ್ ಮೀಟರ್ಸ್ ಮಾಡಿದ್ದಾರೆ. What is the tender agreement and what is the rate "hey have paid for the excess quantity other than the tendered quantityt?

ಶ್ರೀ ಡಿ. ಕೆ. ನಾಯ್ಕರ್.- ಎಷ್ಟು ರೇಟ್ ಕೊಟ್ಟಿದ್ದಾರೆ, ಎಷ್ಟು ಎಕ್ಸೆಸ್ ಕೊಟ್ಟಿದ್ದಾರೆ, ಅದು ಮಹತ್ವದ್ದು ಅಲ್ಲ. ಯಾವ ಸಂದರ್ಭದಲ್ಲಿ ಯಾವ ಅಪ್ರೂವ್ ಮೇಲೆ ಆಗಿದೆ ಎನ್ನುವುದು......

ಶ್ರೀ ಎಚ್. ಡಿ. ದೇವೇಗೌಡ.—ಟೆಂಡರ್ ಅಗ್ರಿಮೆಂಟ್ ಮೇಲೆ ಮಾಡಿದ್ದಾರಲ್ಲ ಅದು ಯಾರ ಅಪ್ಪನಮನೆಗಂಟು ಅಲ್ಲ.

ಶ್ರೀ ಡಿ. ಕೆ. ನಾಯ್ಕರ್.—ಕಮಿಟಿಯವರು ಇದ್ದರಲ್ಲ.

SRI H. D. DEVEGOWDA.—They must act according to the tender agreement.

ಶ್ರೀ ಡಿ. ಕೆ. ನಾಯ್ಕರ್.—ಈಗ ಅವರ ಟೀಕೆ ಏನು ಇದೆ. ಆ ಟೀಕೆಯ ಬಗ್ಗೆ ನಾನು ಹೇಳುತ್ತಾ ಇರುವಾಗ........

SRI H. D. DEVEGOWDA.—The committee has to be surcharged. I have made the charges only on documentary evidence. I have quoted the resolutions of the Board as to how they have taken decisions regarding defferent ground-level reservoirs, ಬುಲ್‌ಟೆಂಪಲ್ ರಿಸರ್ವಾಯರಿಗೂ ಬೈರಸಂದ್ರದ್ದಕ್ಕೂ ಕಾಂಟ್ರರಿ ಡಿಸಿಷನ್ ತೆಗೆದುಕೊಂಡಿದ್ದಾರೆ. ಅದನ್ನು ನಾನು ಕೋಟ್ ಮಾಡಿದ್ದೇನೆ.

ಶ್ರೀ ಡಿ. ಕೆ, ನಾಯ್ಕರ್.—ನಾನು ಹೇಳಿದ್ದನ್ನು ಮಾನ್ಯ ದೇವೇಗೌಡರು ಪುನಃ ತಿಳಿದುಕೊಳ್ಳಲಿಲ್ಲ ಎಂದು ಕಾಣುತ್ತದೆ. ಬುಲ್‌ಟೆಂಪಲ್ ಏರಿಯಾದಲ್ಲಿ ರಾಕಿ ಪ್ಲೇಸ್ ಇರುವುದು ಎಕ್ಸ್‌ಕವೇಷನ್‌ಗೆ ಹೆಚ್ಚಾಗಿ ಖರ್ಚಾಗುವುದು ಅವಶ್ಯಕ ಇದೆ ಎನ್ನುವುದನ್ನು ಹೇಳಿದ್ದೇನೆ. ಇನ್ನೊಂದು ಕಡೆ ಲ್ಯಾಂಡ್ ಕಾಸ್ಟ್ ಹೆಚ್ಚಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಟೆಂಡರ್ ಅಗ್ರಿಮೆಂಟ್ ಟೆಂಡರ್ ಕ್ವಾಂಟಿಟಿ ಬಿಟ್ಟು ಹೆಚ್ಚಿಗೆ ದುಡ್ಡು ಕೊಟ್ಟಿದ್ದಾರೆ. What is the tender agreement ? Is the decision taken is in accordance with the tender agreement ? If is is not in accordance with the tender agreement, how they have deviated the procedure? How they have adopted a different strategy at different places? ದಯಮಾಡಿ ವಿವರಣೆ ಕೊಡಿ.

ಶ್ರೀ ಡಿ. ಕೆ. ನಾಯ್ಕರ್.—ಅದನ್ನೇ ನಾನು ಹೇಳುತ್ತಿದ್ದೆ. ತಮಗೆ ಒಂದು ಸಂಶಯ ಬಂದಿದೆ. ಬೋರ್ಡ್‌ನವರಾಗಲೀ, ಕಮಿಟಿಯವರಾಗಲೀ ನೋಡೇ ಕೆಲಸವನ್ನು ಅಪ್ರೂವ್ ಮಾಡಿದ್ದಾರೆ. ಅಪ್ರೂವ್ ಮಾಡಿದನಂತರ ಈಗ ಅದು ಮಾಡಲಿಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ ಎಂದು ನಾನು ಹೇಳಿದೆ.

SRI H. D. DEVEGOWDA.—They cannot do according to the whims and fancies……

SRI T.R. SHAMANNA.-The Hon'ble minister is making much about the Bull-temple reservoir. My house is hardly 100 ft. from that Reservoir. I am watching it everday. It is true there were big rocks I may tell the Hon'ble Minister that the Contractor in collusion with the officers has made double the profit, because the stone required for the reservoir was cut there and used and also the boulders were made into jelly and used. Thereby more than 25 per cent of the expenditure has been reduced by using the stone available there. Except a few bond stones, all other requirements of stone were used from there alone. The cost therefore should come down; it should not go up.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಶಾಮಣ್ಣನವರು ಹೇಳುತ್ತಾ ಇರುವಂಥ ವಿಷಯ ಹೊಸದಾಗಿ ಬಂದ ವಿಷಯ.

ಶ್ರೀ ಹೆಚ್. ಡಿ. ದೇವೇಗೌಡ.—ನೀವು ಇದರಲ್ಲಿ ಭಾಗಿಗಳಾಗಿದ್ದೀರಿ ಎಂದು ಅಲ್ಲ. ಬೋರ್ಡ್‌ನವರು ಹೇಗೆ ಆಕ್ಟ್ ಮಾಡಿದ್ದಾರೆಂದು ನಾನು ಹೇಳಿದೆ. ಒಂದರಲ್ಲಿ ಅಗ್ರಿಮೆಂಟ್ ಪ್ರಕಾರ ಮಾಡಿದ್ದಾರೆ, ಮತ್ತೊಂದರಲ್ಲಿ ಅಗ್ರಿಮೆಂಟ್ ಬಿಟ್ಟು ಮಾಡಿದ್ದಾರೆ. ಈ ರಿಸರ್ವಾಯರ್‌ನಲ್ಲಿ ಯಾವ ಯಾವ ಸಂದರ್ಭಕ್ಕೆ ಯಾವ ಯಾವ ರೀತಿಯಲ್ಲಿ ನಿರ್ಣಯ ಮಾಡಿದ್ದಾರೆಂದು ನಾನು ಹೇಳಿದೆ. ೨೦ ರೂಪಾಯಿ ಟೆಂಡರ್ ರೇಟ್ ಇದ್ದಾಗ scheduled ರೇಟ್ ಕೊಟ್ಟು, ಟೆಂಡರ್ ರೆಟ್ ೫೭ ಇದ್ದರೆ ಎಕ್ಸೆಸ್ ಕ್ವಾಂಟಿಟಿ ಟೆಂಡರ್ ರೇಟ್ ಕೊಡುತ್ತೀರಿ. They must also act according to the rules. Whether they have acted ? Is it not wrong ? Your are a law Minister, I towant know whether they have acted in accordance with the conditions of the tender agreement ? ಇದು ಮುಖ್ಯವಾಗಿ ಇರುವುದು.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ದೇವೇಗೌಡರು ಹೇಳಿದ್ದನ್ನು ನಾನು ಕೇಳಿದ್ದೇನೆ, ನಾನು ಹೇಳಿದನ್ನು ದೇವೇಗೌಡರು ಕೇಳಿದ್ದಾರೆ, ನಾನು ಏನು ಹೇಳಿದೆ, ಇದು ಕಾನೂನು ಬದ್ಧವಾಗಿ ಇದೆಯೋ ಇಲ್ಲವೋ ಎಂಬುದನ್ನು ಅವರು ಕೇಳುತ್ತಿದ್ದಾರೆ. ಟೆಂಡರ್ ಕಂಡೀಷನ್ಸ್ ಪ್ರಕಾರ ಮಾಡಿದ್ದಾರೋ ಇಲ್ಲವೋ, ಎಂದು ಕೇಳಿದ್ದಾರೆ. ಕಂಡೀಷನ್ಸ್ ಪ್ರಕಾರ ಇದೆಯೋ ಇಲ್ಲವೋ ಎಂಬುದನ್ನು ಎಕ್ಸ್‌ಪರ್ಟ್ ಕಮಿಟಿ ಸ್ಕ್ರುಟಿನಿ ಮಾಡಿದೆ.

SRI H. D. DEVEGOWDA-He has acted in duel capacity as Chairman of the Technical Committee and the Chairman of the Board.

ಶ್ರೀ ಡಿ. ಕೆ. ನಾಯ್ಕರ್.—ಟೆಕ್ನಿಕಲ್ ಕಮಿಟಿ ಛೇರ್ಮನ್ ಒಬ್ಬರೇ ಅಲ್ಲ, ಲೀಗಲ್ ಅಡ್ವೈಸರ್ ಇರುತ್ತಾರೆ, ಇನ್ನೂ ಇತರೆಯವರೂ ಇರುತ್ತಾರೆ. ಅವರನ್ನೆಲ್ಲಾ ಇಟ್ಟುಕೊಂಡು ಮಾಡುವುದು, ಇದು ಒಬ್ಬರೇ ಮಾಡಿದ್ದು ಎಂದು ಹೇಳುವುದು ಸಾಧುವಾದುದಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—೩ ಕೋಟಿ ರೂಪಾಯಿಗಳ ಅವ್ಯವಹಾರವನ್ನು ನಿನ್ನೆ ನಾನು ಪ್ರಸ್ತಾಪ ಮಾಡಿದ್ದು. The Technical Committee member are I.M. Mugdum V, D. Kulkarni, Chief Engineer of the Board. He has made a report that the excess quantity has to be paid in accordance with the tender agreement as per clause 13 (2). I have got the report of the Chief Engineer also- ಸ್ವಾಮಿ, ಇದೇ ಇಂಜಿನಿಯರ್‌ರವರು ಇಲ್ಲಿ ಮೆಂಬರ್ ಆಗಿ ಕೂತುಕೊಂಡು ನಿರ್ಣಯ ಮಾಡಿದ್ದಾರೆ, ಯಾರ ಪ್ರಭಾವದಲ್ಲಿ ಮಾಡಿದ್ದಾರೆ ? ಟೆಂಡರ್ ಅಗ್ರಿಮೆಂಟ್ ಪ್ರಕಾರ ಎಕ್ಸೆಸ್ ಕ್ವಾಂಟಿಟಿಗೆ ಷೆಡ್ಯೂಲ್ಡ್ ರೇಟ್ ಮತ್ತು ಟೆಂಡರ್ ಪ್ರೀಮಿಯಂ ಕೊಡಬೇಕೆಂದು ಇದೆ. Some of

the gentleman was sitting in the Committee over which Sri Mugdum presided. I have made a specific charge. What are the functions of the Technical Committee and the Board of the Chief Engineer ?

SRI H. N. NANJE GOWDA.—The point for consideratian is the scheduled rate plus or minus tender rate or otherwise negotiated, is to be given.

SRI H. D. DEVE GOWDA.—The tendered rate was higher. It is not a small quantity. Scheduled rate was 37. Tendered rate was 57 It is not a small quantity. It was about 6,000 pubic Meters. ಕೆಂಟ್ರಾಕ್ಟರ್‌ರವರ ಜೊತೆಯಲ್ಲಿ ಜಲಕ್ರೀಡೆ ಆಡಿದ ಫೋಟೋವನ್ನೂ ಕೂಡ ಕೊಡುತ್ತೇನೆ, if the Hon. Speaker asks me to place it before the House.

ಶ್ರೀ ಹೆಚ್. ಎನ್. ನಂಜೇಗೌಡ.—ಇದೆಲ್ಲಾ ೧೯೭೨ನೇ ಇಸವಿಗಿಂತ ಮುಂದೆ ಕೊಟ್ಟಿದ್ದಾರೋ ಆಮೇಲೆ ಕೊಟಿದ್ದಾರೋ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ.

ಶ್ರೀ ಡಿ. ಕೆ ನಾಯ್ಕರ್.—ಆ ತಾರೀಖು ನನ್ನಲ್ಲಿ ಇಲ್ಲ. ಬೇಕಾದರೆ ತರಿಸಿಕೊಡುತ್ತೇನೆ. ಆದರೆ ಮಾನ್ಯ ದೇವೇಗೌಡರು ಇನ್ನೊಂದು ವಾದವನ್ನು ಮಾಡಿದ್ದಾರೆ. ಏನೆಂದರೆ ವೃಷಭಾವತಿ ವ್ಯಾಲಿ ಟ್ರೀಟ್‌ಮೆಂಟ್ ಪ್ಲಾಂಟ್‌ನಲ್ಲಿ ೪–೫ ಕಿಲೋಮೀಟರ್ಸ್‌ಗೆ ಲೀಡ್ ಚಾರ್ಜಸ್ ಎಂದು ಸುಮಾರು ೯೫ ಸಾವಿರ ರೂಪಾಯಿಗಳನ್ನು ಅನಾವಶ್ಯಕವಾಗಿ ಖರ್ಚುಮಾಡಿದ್ದಾರೆ ಎಂದು ಇದು ಒಂದು ದುಂದುಗಾರಿಕೆ ಖರ್ಚು ಎಂದು ಹೇಳಿದ್ದಾರೆ. ಮಾನ್ಯ ದೇವೇಗೌಡರು ಒಂದು ವಿಷಯ ಕಲ್ಪನೆ ಮಾಡಿಕೊಳ್ಳಬೇಕು, ಏನೆಂದರೆ ಪಕ್ಕದಲ್ಲೇ ಇರುವಂತಹ ಒಂದು ವ್ಯಾಲಿಗೆ......

SRI H.D. DEVE GOWDA—False leed of 4 to 5 Kms. has been given.

ಶ್ರೀ ಡಿ. ಕೆ. ನಾಯ್ಕರ್.—ನಾನು ಆದನ್ನು ಬರೆದುಕೊಂಡಿದ್ದೇನೆ. ಪಕ್ಕದಲ್ಲೇ ವ್ಯಾಲಿ ಇರುವಾಗ ಆ ಸ್ಟೆಫ್‌ನ್ನು ಆ ವ್ಯಾಲಿಯಲ್ಲೇ ಹಾಕಬಹುದಾಗಿತ್ತು, ಇದರಿಂದ ಲೀಡ್ ಖರ್ಚು ಅಷ್ಟು ಬರುತ್ತಾ ಇರಲಿಲ್ಲ ಎಂದು ಒಂದು ವಾದ ನಿಮ್ಮದು. ಸ್ವಾಮಿ, ಈ ವಾದದ ಬಗ್ಗೆ ನನ್ನ ಉತ್ತರ ಇಷ್ಟೆ. ತಾವು ಇದನ್ನು ಬಹಳ ದೊಡ್ಡ ಅಲಿಗೇಷನ್ ಎಂದು ತಿಳಿದುಕೊಂಡಿದ್ದೀರಿ. ಆ ವ್ಯಾಲಿ ಪಕ್ಕದಲ್ಲೇ ಇದ್ದುದರಿಂದ ಎಕ್ಸ್‌ಕವೇಷನ್ ಸ್ಟಫ್‌ನ್ನು ಆ ವ್ಯಾಲಿಯಲ್ಲೇ ಹಾಕಿ, ಅಲ್ಲಿ ಮಣ್ಣು ತುಂಬಿಕೊಂಡು, ನೀರು ......

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. The matter has already been before the Vigilence Commission. I know it. They are already probing into the matter. ಸಭೆಯ ಮುಂದೆ ವಿಜಿಲೆನ್ಸ್ ಕಮಿಟಿಯ ರಿಪೋರ್ಟ್‌ನ್ನು ಇಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಆದು ಬಂದಾಗ ನೋಡೋಣ.

ಶ್ರೀ ಸಿ. ಬೈರೇಗೌಡ.—ಆ ಎಕ್ಸ್‌ಕವೇಟೆಡ್ ಸ್ಟಫ್ ಕ್ವಾಂಟಿಟಿ ಎಷ್ಟು ?

MR. DEPUTY SPEAKER—The hon Member must have patience.

ಶ್ರೀ ಡಿ. ಕೆ, ನಾಯ್ಕರ್.—ಇಲ್ಲಿಯವರೆಗೂ ಮಾಡಿದಂಥ ಚಾರ್ಜಸ್‌ನ್ನು ತುಟಿ ಪಿಟಕ್ ಎನ್ನದೆ ಕೇಳಿದ್ದೇನೆ. ಅದೇರೀತಿ ಮಾನ್ಯ ದೇವೇಗೌಡರೂ ಏತಕ್ಕೆ ಸುಮ್ಮನೆ ಇರುವುದಿಲ್ಲವೋ ನನಗೆ ಅರ್ಥವಾಗುತ್ತಿಲ್ಲ. ಆಮೇಲೆ ಬೇಕಾದರೆ ಕ್ಲಾರಿಫಿಕೇಷನ್ ಕೇಳಲಿ. ವೃಶಭಾವತಿ ವ್ಯಾಲಿ ಬಗ್ಗೆ ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ಅದೇ ವ್ಯಾಲಿಯಲ್ಲಿ ತಗ್ಗು ಇದ್ದು ಮುಚ್ಚಬೇಕು ಎಂದು ಹೇಳಿದರೆ, ಅದನ್ನು ವ್ಯಾಲಿ ಒಳಗೆ ಹಾಕಿದರೆ. ವ್ಯಾಲಿ ಕಟ್ಟಾಗಿ ಹೋಗುತ್ತದೆ ಮಳೆಗಾಲದ ಪರಿಸ್ಥಿತಿಯಲ್ಲಿ ಏನು ಆಗುತ್ತಿತ್ತು. ಅದನ್ನು ಮುಚ್ಚುವುದಕ್ಕೆ ಆಗುವುದಿಲ್ಲ. ಆಗಿದ್ದಪಕ್ಷದಲ್ಲಿ ನಾಲ್ಕೈದು ಕಿಲೋಮಿಟರ್‌ಗಳಷ್ಟಾದರೂ ವೇಸ್ಟ್ ವೈರ್ ಹಾಕಬೇಕಾಗುತ್ತದೆ. ಅದರ ವರ್ಕ್‌ಗಾಗಿ ಪ್ಲೇಸ್ ಬೇಕು, ಇದೆನ್ನೆಲ್ಲ ಕನ್‌ಸಿಡರ್ ಮಾಡಿಕೊಂಡು ಟೆಕ್ನಿಕಲ್ ಕಮಿಟಿಯವರು ಅಪ್ರೂವ್ ಮಾಡಿ ಇದನ್ನು ಸ್ಯಾಂಕ್ಷನ್ ಮಾಡಿದ್ದಾರೆ. ಆದುದರಿಂದ ೯೫ ಸಾವಿರ ದುಂದುವೆಚ್ಚವಾಗಿದೆ ಎಂದು ಹೇಳುವುದರಲ್ಲಿ ಏನು ಹುರುಳಿಲ್ಲವೆಂದು ನನ್ನ ವಿಚಾರ. ಇನ್ನು ಬೆಳ್ಳಂದೂರು ಟ್ಯಾಂಕಿನ ಬಗ್ಗೆ ಹೇಳಿದ್ದಾರೆ,

ಶ್ರೀ ಎಚ್. ಡಿ ದೇವೇಗೌಡ.—ಆ ಪದವನ್ನು ಬದಲಾವಣೆ ಮಾಡಿಕೊಳ್ಳಿ, ಹುರುಳಿ ಇಲ್ಲ ಎಂದು ಹೇಳಿ.

ಶ್ರೀ ಡಿ. ಕೆ. ನಾಯ್ಕರ್.—ತಮ್ಮ ಬಾಷೆ ನೋಡೋಣ. ಬೆಳ್ಳಂದೂರು ಟ್ಯಾಂಕ್ ಕೇಸ್ ಡೂಟ್ಮ್ಯ ಡಿಸ್‌ಸ್ಟ್ರಕ್ಟಿವ್ ಡಿಸೆ ನ್ ಎಂದು ವಾದ. ಆದರಿಂದಾಗಿ ೪ ಫುಟ್ ಕೆಳಗೆ ವೇಸ್ಟ್ ವೈರ್ ಮಾಡುವಾಗ ೩.೫ ಲಕ್ಷ ಎಕ್‌ಸ್ಟ್ರಾ ಖರ್ಚು ಬಂತು ಎಂದು ಹೇಳಿದ್ದೀರಿ. ಬೆಳ್ಳಂದರೂ ಟ್ಯಾಂಕ್ ನೀರು ಕೊಡುವುದು ಏನ ಇದೆ ಅದರ ಬಗ್ಗೆ ವಿಶೇಷವಾಗಿ ಹೇಳುವಂತ! ಅವಕಾಶವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ಊರಲ್ಲಿ ಏನು ಟ್ರೆಂಚ್ ಮಾಡಿದ್ದಾರೆ ಅದನ್ನು ಒಂದು ದೊಡ್ಡ ಪೈಪ್‌ನಿಂದ ವ್ಯಾಲಿಗೆ ಕೊಡುತ್ತಾರೆ. ಊರಿನಿಂದ ಪೈಪ್ ಕೊಡುವಾಗ ವ್ಯಾಲಿ ಊರಿನ ಲೆವಲ್‌ನ್ನು ಕಾಯ್ದುಕೊಳ್ಳುವಂತೆ ಆ ಮಟ್ಟದಲ್ಲಿ ಇಡುತ್ತಾರೆ. ನೀರನ್ನು ಬೆಳ್ಳಂದೂರು ಟ್ಯಾಂಕಿಗೆ ಕೂಡಿಸಬೇಕಾದರೆ ಮೂರು ಆಲ್ಟರ್‌ನೇಟೀವ್ಸ್ ಇರುತ್ತದೆ. ಒಂದು ಅದರಿಂದ ನೀರನ್ನು ಟ್ಯಾಂಕಿಗೆ ಪಂಪ್ ಮಾಡಬೇಕು. ಎರಡನೆಯದು ಟ್ಯಾಂಕಿಗೆ ಪೈಪ್ ನಿಂದ ವಯ್ಯಬೇಕು, ಇಲ್ಲದಿದ್ದರೆ ನಾಲ್ಕು ಫುಟ್ ಕೆಳಗಿನ ಆಳದೊಳಗೆ ವಯ್ಯಬೇಕು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ, ನೀರನ್ನು ಲಿಫ್ಟ್ ಮಾಡಬೇಕಾದರೆ ೧೦ ಲಕ್ಷ ಖರ್ಚು ಬರುತ್ತದೆ, ಪೈಪ್ ಮಾಡಬೇಕಾದರೆ ಅದಕ್ಕಿಂತ ಹೆಚ್ಚು ಖರ್ಚಾಗುತ್ತದೆ. ೪ ಫುಟ್ ಕೆಳಗೆ ಮಾಡಿದರೆ ಮಾತ್ರ ೩½ ಲಕ್ಷ ಬರುತ್ತದೆ ಎನ್ನುವುದು ಮಾಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಯೋಜನೆ ಮಾಡಿದ್ದು ಯಾವಾಗ ಎಂದರೆ ಎಂ.ಡಬ್ಲ್ಯೂ. ಲೆವಲ್‌ನಲ್ಲಿ ನೀರು ನಿಂತರೆ ಕೆರೆಗೆ ಬರುತ್ತದೆ ಎಂದು ಗೊತ್ತಾದ ಮೇಲೆ ಮೋರಿ ಯೋಜನೆ ಬರಲಿಲ್ಲ. ಪೈಪ್ ಲೆವಲ್‌ನಲ್ಲಿ ನೀರು ನಿಂತರೆ ಕೆರೆಯಲ್ಲಿ ನೀರು ಹೋಗುವುದು ಇರಲ್ಲಿ ವಾಪಸ್ ಬೆಂಗಳೂರಿಗೆ ಬರುತ್ತದೆ. ಇತನ್ನು ತಗ್ಗಿಸಬೇಕು, ಇಲ್ಲದಿದ್ದರೆ ಲಿಫ್ಟ್ ಮಾಡಬೇಕು ; ಆದರೆ ಆಲ್ಟರ್‌ನೇಟಿವ್ ಪ್ರಪೋಸಲ್ಸ್ ನಿಮ್ಮ ಎಕ್ಸ್‌ಪರ್ಟ್ಸ್ ಇಂಜಿನೀಯರ್ಸ್ ತಲೆಯಲ್ಲಿ ಆಮೇಲೆ ಬಂತು.

ಶ್ರೀ ಡಿ. ಕೆ. ನಾಯ್ಕರ್.—ಇಲ್ಲಿ ಯಾವಾಗ ಹೊಳೆಯಿತು ಎಂಬುದು ಪ್ರಶ್ನೆ ಅಲ್ಲ. ಅವರು ಇಲ್ಲಿ ೧೦ ಲಕ್ಷದಲ್ಲಿ ಮಾಡಬೇಕಾದುದು ಮೂರೂವರೆ ಲಕ್ಷದಲ್ಲಿ ಮಾಡಿದ್ದಾರೆ, ಆದಕಾರಣ ಇದರಲ್ಲಿ ದುಂದಾಗಿದೆ ಎನ್ನುವ ಪ್ರಶ್ನೆ ಬರುವುದಿಲ್ಲ. ಇದು ದುಂದುವೆಚ್ಚವಲ್ಲವೆಂದು ಮಾನ್ಯ ದೇವೇಗೌಡರಿಗೆ ತಮ್ಮ ಮುಖಾಂತರ ಹೇಳುತ್ತಾ ಇದ್ದೇನೆ.

SRI H D. DEVEGOWDA—On accounts of difective designing there was addittional expenditure. I have made specific charges.

SRI M. SHEERANALY CHANDRASEKHAR.—To interrupt, the Hon. Minister has to yield or the Chair has to give permission. Now can Mr. Deve Gowda rise every now and then ?

MR. DEPUTY SPEAKER.—It is a very sound, respected, recognised point of Order. I uphold it.

ಶ್ರೀ ಡಿ.ಕೆ. ನಾಯ್ಕರ್.—ಶ್ರೀ ದೇವೇಗೌಡರು ಇನ್ನೊಂದು ವಿಚಿತ್ರವಾದ ಟೀಕೆಯನ್ನು ಮಾಡಿದ್ದಾರೆ. ನಾನು ತಮ್ಮ ಮುಖಾಂತರ ಸಾದರಪಡಿಸುವುದೇನೆಂದರೆ ಕಾವೇರಿ ಭವನಕ್ಕೆ ೧.೨೪ ಕೋಟಿ ರೂಪಾಯಿ ಇದು ದನ್ನು ೨ ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡಿದ್ದಾರೆ ಮೆಸರ್ಸ್ ಗೊಟಿಂಗ್ ಡೊಂಗ್ರೆ ಅಂಡ್ ಕಂಪೆನಿ, ಬಾಂಬೆ, ಅವರಿಗೆ ಅನ್ಯಾಯವಾಗಿ ೩ ಲಕ್ಷ ರೂಪಾಯಿಗಳನ್ನು ಸರ್ಕಾರ ಕೊಟ್ಟಿದೆ ಎಂದು ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಹೇಳುವುದು, ಒಬ್ಬ ಡಿಸೈನ್‌ಮಾಸ್ಟರ್ ಕಡೆಯಿಂದ ಡಿಸೈನ್ ಮಾಡಿಸಿದಮೇಲೆ ಸಹ ಆಗಾಗ್ಗೆ ಬದಲಾವಣೆ ಆಗಿರುವುದನ್ನು ನೋಡಬಹುದು. ನಾನಾ ರೀತಿಯಿಂದ ಬದಲಾವಣೆ ಮಾಡಿದ್ದಾರೆ. ಅದು ಬದಲಾವಣೆ ಆದಮೇಲೆ ಕಂಟ್ರಾಕ್ಟರ್ಸ್‌ಗೆ ೮೦ ಲಕ್ಷ ರೂಪಾಯಿ ಹೆಚ್ಚು ಕೊಟ್ಟಿದ್ದಾರೆ.

ಶ್ರೀ ಡಿ. ಕೆ. ನಾಯ್ಕರ್.—ಇದರ ಬಗ್ಗೆ ಹೇಳುತ್ತೇನೆ. ಗವರ್ನ್‌ಮೆಂಟ್ ಆರ್ಕಿಟೆಕ್ಟ್ ಸರ್ವೀಸನ್ನು ಉಪಯೋಗಿಸಿಕೊಳ್ಳದೆ, ಗೋಟಿಂಗ್ ಡೋಂಗ್ರೆ ಅಂಡ್ ಕಂಪನಿಗೆ ಡಿಸೈನ್ ಆರ್ಕಿಟೆಕ್ಟ್ ಕೆಲಸ ಕೊಟ್ಟು, ಅದಕ್ಕಾಗಿ ಮೂರು ಲಕ್ಷ ರೂಪಾಯಿ ಕೊಟ್ಟಿದ್ದೀರೆಂದು ಆಪಾದನೆ ಮಾಡಿದ್ದಾರೆ ಇದರಲ್ಲಿ ನಾನು ಹೇಳುವುದು ಏನು ಎಂದರೆ ಗೋಟಿಂಗ್ ಡೊಂಗೆ ಅಂಡ್ ಕಂಪನಿಯವರು ಏನು ಇದ್ದಾರೆ ಅವರು ಬಾಂಬೆನಲ್ಲಿ ಇರತಕ್ಕ ಆರ್ಕಿಟೆಕ್ಟ್ಸ್.

ಶ್ರೀ ಎಚ್. ಡಿ. ದೇವೇಗೌಡ.— ಬೋರ್ಡ್‌ನ್ನು ಅಟ್‌ನಮಸ್ ಮಾಡಿದ್ದು ಹಿಂದಿನ ಸರ್ಕಾರ ಪೇಮೆಂಟ್ ಮಾಡಿದ್ದು ಬೋರ್ಡ್‌ನವರು ನಿಮಗೆ ಏನೂ ಗೊತ್ತಿಲ್ಲ.

ಶ್ರೀ ಡಿ. ಕೆ. ನಾಯ್ಕರ್.—ತಾವು ಏನು ಹೇಳಿದ್ದು ಎಂಬುದು ಗೊತ್ತಾಯಿತು ಗವರ್ನ್‌ಮೆಂಟ್ ಆರ್ಕಿಟೆಕ್ಟ್‌ನ್ನು ಉಪಯೋಗಮಾಡದೆ ಬಾಂಬೆಯವರಿಗೆ ಕೊಟ್ಟಿದ್ದೀರಿ ಎಂಬ ಆಪಾದನೆ ಏನು ಇದೆ ಅದನ್ನು ಹೇಳಿದೆ. ಬಾಂಬೆಯವರು ಡಿಸೈನ್ ಮಾಡಲಿಕ್ಕೆ ಹೇಳಿದ್ದು ಹಿಂದಿನ ಸರ್ಕಾರ ಎಂದು ಹೇಳಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರ ಎಲ್ಲಿದೆ ? ಬೋರ್ಡ್ ಎಲ್ಲಿದೆ ? ಏನು ಸಂದರ್ಭ ಇದರಲ್ಲಿ?

ಶ್ರೀ ಡಿ. ಕೆ. ನಾಯ್ಕರ್.—ಆಗ ಮಾಡಬೇಕಾದುದನ್ನು ಅವರು ಸಜೆಸ್ಟ್ ಮಾಡಿ ಮಾಡಿಸಿದ್ದಾರೆ. ಇದನ್ನು ನಾವು ಮಾಡಿಸಿದ್ದಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಬೋರ್ಡ್ ಆಟನಮಸ್ ಬಾಡಿ ಎಂದಮೇಲೆ ಸರ್ಕಾರ ಮಾಡುವ ಪ್ರಶ್ನೆ ಎಲ್ಲಿ ಬಂತು ? ಬೋರ್ಡ್ ಮಾಡಿರಬೇಕು.

ಶ್ರೀ ಡಿ. ಕೆ. ನಾಯ್ಕರ್.—ಆಮೇಲೆ ಅವರು ಬಾಂಬೆಯವರ ಕಡೆಯಿಂದ ಡಿಸೈನ್ ಮಾಡಿಸಿ ಕೊಡಿಸಿದ್ದಾರೆ. ಕಾವೇರಿ ಏನು ಒಂದು ಸ್ಟ್ಯಾಚು ಮಾಡಿದ್ದಾರೆ, ಅದಕ್ಕೆ ಎರಡು ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ ಎನ್ನುವುದನ್ನು ತಾವು ಹೇಳಿದಿರಿ.

ಶ್ರೀ ಎಚ್. ಡಿ. ದೇವೇಗೌಡ.—ಅದರಲ್ಲಿ ಕಲಾ ಕೌಶಲ್ಯ ಎಲ್ಲಿದೆ?

ಶ್ರೀ ಡಿ. ಕೆ. ನಾಯ್ಕರ್.—ಆ ಬಗ್ಗೆ ಮಾನ್ಯ ದೇವೇಗೌಡರು ಆಪಾದನೆ ಮಾಡಿದ್ದಾರೆ. ಆದರೆ ಆ ಬಗ್ಗೆ ಟೆಂಡರ್ ಕರೆದು ಮಾಡಿಸಿದ್ದೇವೆ. ೨ ಲಕ್ಷ ರೂಪಾಯಿಗಳು ಖರ್ಚಾಗಿದ್ದರೂ ಸಹ ಟೆಂಡರ್ ಕರೆದು ಯಾರು ಲೋಯಸ್ಟ್ ಟೆಂಡರ್ ಮಾಡಿದ್ದಾರೆ ; ಅವರ ಕಡೆಯಿಂದ ಮಾಡಿಸಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಟೆಂಡರ್ ಕರೆದುದು ಇಲ್ಲ.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೆ ಪ್ರೊಸೀಜರ್ ಪ್ರಕಾರ ಮಾಡಿದ್ದೇವೆ. ಇನ್ನು ಮಾನ್ಯ ದೇವೇಗೌಡರು ಕೆಲವೊಂದು ವಿಷಯ ಹೇಳುವಾಗ ಪ್ರೆಜರ್ ಏರ್ ವಾಲ್ವ್‌ಗೆ ೨೫ ಲಕ್ಷ ರೂಪಾಯಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಇನ್ನು ಪೈಪ್‌ಲೈನ್ ಎಕ್ಸ್‌ಕವೇಷನ್‌ಗೆ ಎಕ್ಸ್‌ಟ್ರಾ ೪೦ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ ಎಂದು ಹೇಳಿದ್ದಾರೆ. ಅಲ್ಲದೇ ೩೦–೪೦ ಪರ್‌ಸೆಂಟ್ ಓಪನ್ ಮಾರ್ಕೆಟ್‌ಗಿಂತ ಹೆಚ್ಚು ಕೊಟ್ಟಿದ್ದಾರೆ ಎಂದು ಟೀಕೆ ಮಾಡಿದ್ದಾರೆ. ಬಹುಶಃ ಮಾನ್ಯ ದೇವೇಗೌಡರಿಗೆ ಟೆಂಡರ್ ವಿಷಯ ಹೇಳಬೇಕು ಎಂದು ಕಾಣುತ್ತದೆ. On 10-2-1972 providing sculpture, electric tower and building model in the premises of C.B.A.B. to represent three Boards ; Provision of Rs. 2 lakhs has been made for sculpture representative... ಮತ್ತೆ ಎವಾಲಕರ್ ಆರ್ಟ್ ಸ್ಟುಡಿಯೋ ಬಾಂಬೆ, ಎನ್. ಎನ್. ಪೈ. ಬಾಂಬೆ ಈ ರೀತಿ ಇಬ್ಬರು ಟೆಂಡರ್ ಹಾಕಿದ್ದರು. ಇದರಲ್ಲಿ ಲೋಯಸ್ಟ್ ಇದ್ದವರಿಗೆ ಕೊಟ್ಟಿದ್ದಾರೆ. ಆದಕಾರಣ ಈಗ ಇವರು ಏನು ಹೇಳುತ್ತಾರೆ ಅದು ನಿಜ ಇಲ್ಲ ಎಂದು ಹೇಳುತ್ತೇನೆ. ಅಲ್ಲದೇ ಇವರು ಇದಕ್ಕೆ ಸವಿಸ್ತಾರ ವಾಗಿ ವಿವರಣೆ ಕೇಳಿದ್ದಾರೆ, ಅದಕ್ಕೆ ನಾನು ಎಷ್ಟು ಸಾಧ್ಯವಿದೆ ಅವೆಲ್ಲವನ್ನೂ ಹೇಳುತ್ತಾ ಬಂದಿದ್ದೇನೆ. ನಂತರ ಡ್ರೈನೇಜ್ ೩೫–೩೬ ಕೋಟಿ ರೂಪಾಯಿ ಖರ್ಚು ಆಗಿದೆ ಎಂದು ಹೇಳಿದರು. ಹಣ ಖರ್ಚು ಮಾಡುವಾಗ ಪ್ರತಿಯೊಂದು ಅಂಶವನ್ನೂ ಟೆಕ್ನಿಕಲ್ ಕಮಿಟಿಯವರು ಗಮನದಲ್ಲಿ ಇಟ್ಟುಕೊಂಡು, ಸ್ಕ್ರೂಟನಿ ಮಾಡಿದ್ದಾರೆ. ಈ ಖರ್ಚಿನಿಂದ ದರ ಏರಿಸಿದ್ದಾರೆ ಎನ್ನುವುದು ಸರಿಯಲ್ಲ ಎಂದು ಹೇಳುತ್ತೇನೆ. ಇದರಲ್ಲಿ ಹಿಂದೆ ನಾನು ಮಾನ್ಯ ಶಾಮಣ್ಣನವರು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿದಾಗ ೨೫ ಸಾವಿರ ಲೀಟರ್ ನೀರನ್ನು ಫ್ರೀಯಾಗಿ ಕೊಟ್ಟಿದ್ದಾರೆ ಎಂದು ಹೇಳಿದ್ದೇನೆ. ಇವತ್ತಿನ ದಿವಸ ಬಡ ಜನತೆ ಕನ್‌ಸ್ಯೂಮ್ ಮಾಡತಕ್ಕಂಥ ಒಂದು ಲೆವೆಲ್ ಏನು ಇದೆ ಆ ಲೆವೆಲ್ ನೋಡಿಕೊಂಡು ೫ ಪೈಸೆ ಇನ್‌ಕ್ರೀಸ್ ಆಗುವ ರೀತಿಯಲ್ಲಿ ಮಾಡಿದ್ದಾರೆ. ಯಾರಲ್ಲಿ ಕೊಡತಕ್ಕ ಕೆಪಾಸಿಟಿ ಇದೆ ಅವರಿಗೆ ೪೦ ಪೈಸೆ ಇದ್ದುದನ್ನು ೮೦ ಪೈಸೆ ಮಾಡಿದ್ದಾರೆ. ಇವೊತ್ತು ಡೊಮೆಸ್ಟಿಕ್ ಕನ್‌ಸ್ಯೂಮರ್ಸ್‌ಗೆ ಒಂದು ರೇಟ್ ಇದೆ, ಮತ್ತೆ ಇಂಡಸ್ಟ್ರಿಯಲ್ ನಾನ್ ಡೊಮೆಸ್ಟಿಕ್‌ಗೆ ಒಂದು ರೇಟು ಇದೆ ಎಂದು ಹೇಳಿದ್ದೇನೆ. ಈ ರೇಟ್ ಫಿಕ್ಸ್ ಮಾಡುವಾಗ ನಾನು ಮಾನ್ಯ ಸದಸ್ಯರಿಗೆ ತಿಳಿಸುವುದು ಏನು ಎಂದರೆ, ಈಗ ಈ ಯೋಜನೆಗೆ ೩೬ ಕೋಟಿ ರೂಪಾಯಿ ಖರ್ಚಾಗಿದೆ ; ಆದಕಾರಣ ಇದನ್ನು ನೋ ಪ್ರಾಫಿಟ್ ಮತ್ತು ನೋ ಲಾಸ್ ಬೇಸಿಸ್ ಮೇಲೆ ನಡೆಸಬೇಕು ಎಂದು ಇದೆಯೇ ಹೊರತು ಇದರಲ್ಲಿ ಲಾಭದಾಯಕವಾಗಿ ಮಾಡಬೇಕು ಎನ್ನುವುದು ಇಲ್ಲ. ಆದ್ದರಿಂದ ಈಗ ಏನು ದರ ಹಾಕಿದೆ ಅದನ್ನು ಪರಿಶೀಲನೆ ಮಾಡಿ ಜನತೆಗೆ ತೊಂದರೆಯಾಗದಂತೆ ನೋ ಪ್ರಾಫಿಟ್ ಮತ್ತು ನೋ ಲಾಸ್ ತತ್ವದ ಆಧಾರದ ಮೇಲೆ ಮಾಡಿರುವುದರಿಂದ ಇದಕ್ಕೆ ಪುನಃ ಪರಿಶೀಲನೆ ಮಾಡಲಿಕ್ಕೆ ಒಂದು ಕಮಿಟಿ ಅಗತ್ಯ ಇಲ್ಲವೆಂದು ಹೇಳುತ್ತೇನೆ. ಮತ್ತೆ ಮಾನ್ಯ ಶಾಮಣ್ಣನವರು ಈ ರೆಸುಲ್ಯೂಷನ್ ಏನು ತಂದಿದ್ದಾರೆ ಅದು ಯೋಗ್ಯವಾದುದಲ್ಲ. ಈ ತರಹ ಕಮಿಟಿ ಮಾಡಲಿಕ್ಕೆ ಈ ಸಭೆ ಮನ್ನಣೆ ಕೊಡುವುದು ಅಗತ್ಯವಿಲ್ಲ ಎಂದು ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಮಾಡಿದ ಆಪಾದನೆಗಳು ವಿಚಿತ್ರ ಆಪಾದನೆಗಳು ಎಂದು ಮಾನ್ಯ ಮಂತ್ರಿಗಳು ಹೇಳಿದರು ; ಮತ್ತು ಇದರ ಬಗ್ಗೆ ನಗಬೇಕೋ ಅಳಬೇಕೋ ಎಂದು ಹೇಳುತ್ತಿದ್ದಾರೆ. ನಾನು ೨೫ ಲಕ್ಷ ರೂಪಾಯಿ ರಿಫ್ಲೆಕ್ಸ್ ವಾಲ್ವ್ ಬಗ್ಗೆ ನೇರವಾಗಿ ಆಪಾದನೆ ಮಾಡಿದ್ದೇನೆ. It was the responsibility of the Contractors to procure, erect, commission and everything. How these valves were purchased by the Board at its cost ? There is an additional expenditure of Rs. 25 lakhs. Whether that amount has been recovered from the contractor or paid by the Board ? I have made other specific charges. 30 to 40% over and above the open market rate, the material were purchased by the Board itself. ಆಮೇಲೆ ಕಂಟ್ರಾಕ್ಟ್‌ದಾರರಿಗೆ ಏನು ಮಾಡಿದ್ದಾರೆ ಎಂದರೆ ಲೇಬರ್ ಚಾರ್ಜಸ್ ಎಂದು ಕೊಟ್ಟಿದ್ದಾರೆ. ಅದು ಹೇಳುತ್ತಾ ಹೋದರೆ ಒಂದು ಸಾವಿರ ಐಟಂಗಳು ಇದೆ. ಅದರಲ್ಲಿ ಒಂದು ಕೋಟಿ ರೂಪಾಯಿ ಸ್ವಿನ್‌ಡಲ್ ಆಗಿದೆ. How could they purchased above 30% to 40% of the open market rate ? ನಿಮಗೆ ವಿಷಯ ಸಂಗ್ರಹಣೆ ಮಾಡಲಿಕ್ಕೆ ಆಗದೇ ಇರಬಹುದು. ೩ ಕೋಟಿ ರೂಪಾಯಿಯಷ್ಟು ಎಕ್ಸೆಸ್ ಪೇಮೆಂಟ್ ಆಗಿದೆ ಎಂದು ನೆನ್ನೆ ದಿವಸವೇ ಪ್ರತಿಯೊಂದು ವಿವರಣೆ ಕೊಟ್ಟು ಸಭೆಯ ಮುಂದೆ ವಿಷಯ ಇಟ್ಟಿದ್ದೇನೆ. ತಾವು ಹೇಳುತ್ತಾ ಇರುವುದು ಯಾವ ಕಮಿಟಿ ಬೇಕಾಗಿಲ್ಲ, ನೋ ಪ್ರಾಫಿಟ್ ನೋ ಲಾಸ್ ಮೇಲೆ ನೀರು ಕೊಡುತ್ತೇವೆ ಎಂದು. ಇವತ್ತಿನ ದಿವಸ ಬೆಂಗಳೂರಿನ ಜನ ತಮ್ಮನ್ನು ಪುಕ್ಕಟ್ಟೆ ನೀರು ಕೊಡಿ ಎಂದು ಕೇಳುತ್ತಾ ಇಲ್ಲ. ಈ ರೀತಿಯಾಗಿ ಅವ್ಯವಹಾರ ನಡೆಯುತ್ತಾ ಇರುವುದು ಸರಿಯಲ್ಲ ಎಂದು ನಾನು ಹೇಳಿದ್ದು. ೧೯೬೯-೭೦ ರಲ್ಲಿ ಈ ಪೈಪ್‌ಗಳ ಬಗ್ಗೆ ೬ ಕೋಟಿ ರೂಪಾಯಿ ಅಷ್ಟು ಅಕ್ರಮ ವ್ಯವಹಾರ ನಡೆದಿದೆ ; ಅದನ್ನು ಹೇಳಿದರೆ ನೀವು ಹಾಗೆ ಹೇಳಿದಿರಿ, ಹೀಗೆ ಹೇಳಿದಿರಿ ಎಂದರೆ ಹೇಗೆ ? ನೀವು ಒಂದು ಕಡೆ ಗ್ರೌಂಡ್ ಲೆವೆಲ್ ರಿಜರ್‌ವಾಯರ್ ಟೆಂಡರ್ ಬಗ್ಗೆ ಯಾವ ತರಹ ಕ್ರಮ ನಡೆದಿದೆ ಎಂದು ಮಾನ್ಯ ನಂಜೇಗೌಡರು ಪ್ರಶ್ನೆ ಕೇಳಿದರೆ ನೀವು ಜಾರಿಕೆ ಉತ್ತರ ಕೊಡುವುದಕ್ಕೆ ಹೋಗುತ್ತೀರಿ.

ಶ್ರೀ ಹೆಚ್. ಎನ್. ನಂಜೇಗೌಡ —ಅದನ್ನು ಪ್ರಶ್ನೆ ಎನ್ನುವುದಕ್ಕಿಂತ ಉತ್ತರ ಅಂದುಕೊಳ್ಳಬೇಕು. The point is, they are definite P.W.D. Codal Rules How could an Officer violate it ? Probably, one expects that they do according to the rules. If there is any excess materials, that should be paid according to the rules.

SRI H. D. DEVEGOWDA —That has not been done. I have quoted the copy of the resolutions and also from the extracts of the resolutions of the Board. ಕಂಟ್ರಾಕ್ಟ್‌ದಾರರಿಗೆ ೨೯ ಲಕ್ಷ ರೂಪಾಯಿ ಎಕ್ಸೆಸ್ ಕೊಟ್ಟಿದ್ದಾರೆ. I have made definite charges based on records. I have also quoted the date of the resolution of the Board.

MR. DEPUTY SPEAKER.—He has replied to all those things.

11-30 A.M.

ಶ್ರೀ ಡಿ. ಕೆ. ನಾಯ್ಕರ್.—ಶ್ರೀಮಾನ್ ಟಿ ಆರ್. ಶಾಮಣ್ಣನವರು ರೆಸಲ್ಯೂಷನ್ ಮೂವ್ ಮಾಡಿದ್ದಾರೆ. ಅವರು ಉತ್ತರ ಕೊಟ್ಟ ಮೇಲೆ ನಾನು ಮಾತನಾಡುತ್ತೇನೆ. ಅಥವಾ ಅವರು ಮಾತನಾಡುವುದಿಲ್ಲ ಎಂದು ಹೇಳಲಿ, ನಾನು ಉತ್ತರ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಬಿಲ್ಡಿಂಗ್ ಕಟ್ಟುವುದಕ್ಕೆ ಬೇಕಾದಂಥ ಕಬ್ಬಿಣವನ್ನು ಕಂಟ್ರಾಕ್ಟರ್ ಸರಬರಾಜು ಮಾಡಿಕೊಳ್ಳಬೇಕಾಗಿತ್ತು ಎಂದು ಕಂಡೀಷನ್ ಇದ್ದರೂ ಸಹ ಡಿಪಾರ್ಟ್‌ಮೆಂಟಿನಿಂದ ಕಬ್ಬಿಣ ಒದಗಿಸಿಕೊಟ್ಟಿದ್ದೀರಿ. ಮೇಲಾಗಿ ಓಪನ್ ಮಾರ್ಕೆಟ್‌ನಲ್ಲಿ ಪರ್ಚೇಸ್ ಮಾಡಿದ್ದರಿಂದ ೧೦ ಲಕ್ಷ ರೂಪಾಯಿ ಹೆಚ್ಚಿಗೆ ಹಣ ಖರ್ಚಾಗಿದೆ ಎನ್ನುವುದನ್ನು ಹೇಳಿದ್ದೀರಿ. ಟೆಂಡರ್ ಅಗ್ರಿಮೆಂಟ್ ಕಂಡೀಷನ್ ಇದ್ದರೂ ಕೂಡ ಡಿಪಾರ್ಟ್‌ಮೆಂಟಿನಿಂದ ಏಕೆ ಕೊಟ್ಟಿದ್ದೀರಿ. ಓಪನ್ ಪರ್ಚೇಸ್ ಮಾಡುವುದಕ್ಕೆ ಏಕೆ ಹೋದಿರಿ. ಅದಕ್ಕೆ ಕ್ಲಾರಿಫಿಕೇಶನ್ ಕೊಡಿ.

ಶ್ರೀ ಎಚ್. ಡಿ. ದೇವೇಗೌಡ.—ಮೂರು ಲಕ್ಷ ರೂಪಾಯಿ ಪ್ರೈವೇಟ್ ಆರ್ಕಿಟೆಕ್ಟಿಗೆ ಕೊಟ್ಟು, ೨೯ ಲಕ್ಷ ಮಿಸಲೇನಿಯಸ್ ಎಕ್ಸ್‌ಪೆಂಡಿಚರ್ ಎಂದು ಖರ್ಚು ಮಾಡುತ್ತಾರೆ. ಮತ್ತೊಂದು ಕಡೆ ಕಂಟ್ರಾಕ್ಟರ್ ಡಿಫಾಲ್ಟರ್ ಎಂದು ಹೇಳಿ ಅವನಿಗೆ ೧೧ ಸಾವಿರ ರೂಪಾಯಿ ಪೆನಾಲ್ಟಿ ಹಾಕಿ, ನಂತರ ಅವನಿಗೆ ೨೯ ಪರ್ಸೆಂಟ್ ಎಕ್ಸೆಸ್ ಹೇಗೆ ಕೊಟ್ಟಿರಿ? For what purpose this 3 lakhs of rupees paid to the Architect? The Board has come to the conclusion that the contractor has violated the terms and conditions of the agreement. Now could they negotiate to pay a sum at the 29 percent more which comes to 14 lakhs. Additional cost of steel is Rs. 16 lakhs and cement is 3 lakhs. ಇದು ಪುಕ್ಕಟೆ ಮನೆ ವ್ಯವಹಾರವೆ? ತಿನ್ನುವುದಕ್ಕೂ ಒಂದು ಮಾರ್ಗ ಇದೆ. ಆ ಮಾರ್ಗ ಬಿಟ್ಟು ಹೋದಾಗಲೇ ಸಿಕ್ಕಿಹಾಕಿಕೊಳ್ಳುವುದು.

ಶ್ರೀ ಡಿ, ಕೆ. ನಾಯ್ಕರ್.—ಅಧ್ಯಕ್ಷರೇ, ಇಲ್ಲಿಯವರೆಗೆ ಕೆಲವೊಂದು ಉದಾಹರಣೆಗಳನ್ನು ಕೊಟ್ಟು ಯಾವರೀತಿ ಆಗಿದೆ ಎನ್ನುವುದನ್ನು ಹೇಳಿದೆ. ಅದರ ಜೊತೆಯಲ್ಲಿ ಆಕ್ಟಿನ ಪ್ರಕಾರ ಬೋರ್ಡಿಗೆ ಸಂಪೂರ್ಣ ಸ್ವಾಯತ್ತತೆ ಇದೆ ಎಂದು ಹೇಳಿದೆ. ಅದರ ಮೇಲೆ ಮತ್ತೆ ವಾದ ಮಾಡಬೇಕಾದ್ದು ಸರಿಯಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಎಂಥೆಂಥದ್ದಕ್ಕೋ ಆರ್ಡಿನೆನ್ಸ್ ಇಷ್ಯೂ ಮಾಡುತ್ತೀರಿ. ಆದರೆ ಇಲ್ಲಿ ದುಡ್ಡು ಹೊಡೆದರೆ ಅಟಾನಮಸ್ ಬಾಡಿ ಎಂದು ಹೇಳುತ್ತೀರಿ. The officers are deputed from P.W.D. Have you no control over these officers?

SRI D. K. NAIKAR.—I was very clear in my statement about allegations made by Hon. Members. If they are really true I don't think the Expert Committee would have over ruled this. Over and above that the Board would have ignored this expenditure, and I have said and I maintain it to the best knowledge of the board: The board has approved it and it has executed this work. More than that there cannot be anything else.

ಶ್ರೀ ಎಚ್. ಡಿ. ದೇವೇಗೌಡ.—ಮೂರು ಕೋಟಿ ರೂಪಾಯಿ ಅವ್ಯವಹಾರ ಎತ್ತಿ ತೋರಿಸಿ ಕೊಟ್ಟಿದ್ದೇನೆ. ಇದರೊಳಗೆ ಏನಾದರೂ ಅಸತ್ಯ ಇದೆಯೋ ಎಂದು ಕಂಡುಹಿಡಿಯಲು ಈ ಮನೆಯು ಒಂದು ಕಮಿಟಿ ಮಾಡಿ ನಿರ್ಣಯ ಮಾಡಿಸಿ ನಾನು ಹೇಳಿದ್ದರಲ್ಲಿ ತಪ್ಪಿದ್ದರೆ I am going to apologise. ಒಬ್ಬ ಆಫಿಸರನ್ನು ಕುರಿತು ಮಾತನಾಡಿದ್ದೇನೆ He is mainly responsible ಎಂದು ಹೇಳಿದ್ದೇವೆ. ವಾಟರ್ ಬೋರ್ಡ್ ಅಟಾನಮಸ್ ಬಾಡಿ ಎಂದು ಹೇಳಿದರೆ I must charge only the Chairman and the members of the Board. ಮೂರು ಕೋಟಿ ರೂಪಾಯಿನ ಅವ್ಯವಹಾರದ ವಿವರಗಳು ನನ್ನ ಕೈಗೆ ಏನು ಸಿಕ್ಕಿದೆ, ಅದನ್ನು ಬೀಗ ಹಾಕಿ ಭದ್ರವಾಗಿ ಮಡಗಿದ್ದಾರೆ. ಇದು ಟೆಕ್ನಿಕಲ್ ಕಮಿಟಿ ಫೇವರ್ಮನ್ ಮಾಡಿರುವುದು. ಅವರನ್ನು ಇನ್ನೂ ೧೧ ತಿಂಗಳು ಇಡಬಹುದು; ಆಮೇಲೆ ಆದರೂ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಹೈಕೋರ್ಟ್ ಜಡ್ಜು, ಅಕೌಂಟೆಂಟ್ ಜನರಲ್ ಮತ್ತು ಚೀಫ್ ಇಂಜಿನಿಯರ್ ಈ ಮೂರು ಜನರನ್ನು ಸೇರಿಸಿ ತ್ರಿಸದಸ್ಯ ಕಮಿಟಿ ಮಾಡಿ ಎಂದು ಹೇಳಿದ್ದೇನೆ. ಯಾವುದೇ ಸರ್ಕಾರದ ತಪ್ಪು ಇರಲಿ, ಅದನ್ನು ಮಾಡಿ ಎಂದು ಹೇಳಿದ್ದೇನೆ. ಆದಾಗುವುದಿಲ್ಲ ಅಂದರೆ ಈ ಮನೆಯ ಸದಸ್ಯರ ಒಂದು ಹೌಸ್ ಕಮಿಟಿ ಮಾಡಿ. ಹೌಸ್ ಕಮಿಟಿಯವರು ಅವ್ಯವಹಾರ ನಡೆದಿಲ್ಲ ಎಂದರೆ ಈ ಅಧಿಕಾರಿಗೆ ಓಪನ್ನಾಗಿ ಈ ಹೌಸ್ ಮುಂಚೇನ ನಾನು ಅಪಾಲಜಿ ಕೇಳುತ್ತೇನೆ. Otherwise that officer must be immediately kept under suspension or he must be censured. Is the Government incapable of handling such an officer? I want the intervention the Minister for Parliamentary affairs ವಿರೋಧಪಕ್ಷದ ನಾಯಕನಾಗಿ ಇದರ ಬಗ್ಗೆ ಹೌಸ್ ಕಮಿಟಿ ಮಾಡಿ ಎಂದು ಹೇಳುತ್ತೇನೆ. ನಾನು ಹೇಳಿದ್ದು ಸತ್ಯವೆಂದು ನಿಜವಾದರೆ I will give an unconditional apology. ಅವರು ಒಬ್ಬ ದೊಡ್ಡ ಸರ್ ಎಂ. ವಿಶ್ವೇಶ್ವರಯ್ಯನವರ ಅಪರಾವತಾರ; ಅಂತಹ ಅಧಿಕಾರಿಗೆ ನಾನು ಅನ್ಯಾಯ ಮಾಡಿದ್ದೇನೆ ಎಂದು ಕಮಿಟಿ ಹೇಳಿದರೆ ನಾನು ಸಭೆ ಮುಂಚೇನ ದೇಶಕ್ಕೆ ಕ್ಷಮೆ ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಚನ್ನಬಸಪ್ಪನವರು ಈ ಬಗ್ಗೆ ಮುಂದುವರಿದು ಮುಖಂಡತ್ವ ವಹಿಸಿ ಮಾತನಾಡಬೇಕಾಗಿತ್ತು. ಏಕೋ ಮಾತನಾಡಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹೋಗಲಿ, ನಾವು ಕಮಿಟಿ ಮಾಡುವುದಿಲ್ಲ. ಇದೇ ರೀತಿ ನಾವು ಆಡಳಿತ ನಡೆಸುತ್ತೇವೆ ಎಂದು ಹೇಳಿಬಿಡಿ.

MR. DEPUTY SPEAKER.—The hon. Minister said that he would give reply after Shamanna's reply. Uuder Rule 294 with the permission of the chair he could speak after obtaining permission from the chair.

SRI H. D. DEVE GOWDA.—On Sri Shamanna's resolution I have made specific charges based on documentary evidence. ಇದೇ ರೀತಿ ನಡೆಸುತ್ತೀರಾ ಹೇಗೆ ? ಒಂದು ನಿರ್ಧಾರ ಹೇಳಬೇಕು. ನೀವು ಎಂಥಾ ಆಧಾರವಾದ ಆಪಾದನೆ ಮಾಡಿದರೂ ನಾವು ಹೀಗೇ ಇರುತ್ತೇವೆ. ನೀವು ಯಾರು ಕೇಳುವುದಕ್ಕೆ ? ನಮಗೆ ಅಧಿಕಾರ ಇದೆ ಎಂದು ಹೇಳಿಬಿಡಿ ; ಇಲ್ಲವೇ ಇದರ ಬಗ್ಗೆ ಕೊನೆಯಪಕ್ಷ ಹೌಸ್ ಕಮಿಟಿ ಆದರೂ ಮಾಡಿ. ಇದು ನನ್ನ ಮಿನಿಮಂ ಡಿಮ್ಯಾಂಡ್.

SRI H. M. CHANNABASAPPA.—The question is we are discussing a resolution. The contents of the resolution is about the rates for water to be fixed after appointing a committee. So, in all deliberations over a resolution, discussion shall be confined only to the subject matter of the resolution. Mr. Devegowda made a lot of charges yesterday and has reiterated some of them today also. We should have no objection if he had brought them at the appropriate time and on the appropriate issue. This is not the occasion to raise them.

A substantive motion should be brought in a proper form setting out the details. To mix up both the issues would not be correct. Even the rules of Procedure prescribes that while discussing a resolution we shall confine ourselves to the subject-matter of the resolution. Let us be guided by the rules of procedure. If hon. member Sri Deve Gowda wants a discussion on the specific charges, he has made, there are other methods to move those issues before this House and they will be considered on merit. But to mix up the two things would not be correct.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಮಾನ್ಯ ದೇವೇಗೌಡರು ಹೇಳಿದ್ದನ್ನು ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು; ಈಗ ಅವರು ಅದನ್ನು ಏತಕ್ಕೆ ಪ್ರಸ್ತಾಪ ಮಾಡಿದರು ಎಂದರೆ,...

SRI DEPUTY SPEAKER.—I know what the hon. Member had in his mind because of my association with him. That is why I said let us not be humurous but only serious. Without wasting the time of the House, I would urge upon hon. member Sri Shamanna to have a reply.

ಶ್ರೀ ಎಚ್. ಡಿ. ದೇವೇಗೌಡ.—ಈಗ ಮಾನ್ಯ ಚನ್ನಬಸಪ್ಪನವರು ಒಂದು ಕ್ರಿಯಾಲೋಪ ಎತ್ತಿದ್ದಾರೆ; ಅದು ಏನು ಎಂದು ಮೊದಲು ಕೇಳೋಣ.

SRI H. M. CHANNABASAPPA —I only drew your attention that this is not the proper occasion. ಅಷ್ಟೇ ಹೊರತು ನಾನು ಯಾವ ಕ್ರಿಯಾಲೋಪವನ್ನು ಎತ್ತಿಲ್ಲ;

ಶ್ರೀ ಎಚ್. ಡಿ. ದೇವೇಗೌಡ.—ಈಗ ಮಾನ್ಯ ಶಾಮಣ್ಣನವರ ಮೂಲ ನಿರ್ಣಯ ಏನಿದೆ ಎಂದರೆ, ಬೆಂಗಳೂರಿನ ನಾಗರೀಕರಿಗೆ ಒದಗಿಸುತ್ತಿರುವ ನೀರಿನ ಬಗ್ಗೆ ದರವನ್ನು ನಿಗದಿ ಮಾಡುವುದಕ್ಕೋಸ್ಕರ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಬೇಕು ಎಂಬುದು; ಅದನ್ನೇ ನಾನು ಮತ್ತೊಂದು ಸಲ ಸ್ಪಷ್ಟೀಕರಣ ಮಾಡಿ ಹೇಳುತ್ತೇನೆ; ಏನೆಂದರೆ, ಇಲ್ಲಿ ಆಗಿರತಕ್ಕಂಥ ದುಂದು ಖರ್ಚು ಏನಿದೆ, ಅದನ್ನೆಲ್ಲಾ ತೆಗೆದು, ಇದಕ್ಕೆ ಆಗಿರತಕ್ಕಂಥ ನ್ಯಾಯವಾದ ಖರ್ಚು ಎಷ್ಟೆಂಬುದನ್ನು ಕಂಡು ಹಿಡಿದು ಅದರ ಒಂದು

ಆಧಾರದ ಮೇಲೆ ನೀರಿನ ದರವನ್ನು ನಿಗದಿ ಮಾಡಬೇಕೆಂದು, ಅದರ ಬದಲು ಎತ್ತಿಗೆ ಜ್ವರ ಬಂತು ಎಂದು ಎಮ್ಮೆಗೆ ಬರೆ ಹಾಕಿದರು ಎಂಬಂತೆ ಇಲ್ಲಿ ಆಗಬಾರದು; ಯಾರೋ ದುಡ್ಡು ತಿಂದರು ಎಂದು ಅದರ ಭಾರವನ್ನು ಜನರ ಮೇಲೆ ಹಾಕುವುದು ಸರಿಯಲ್ಲ ೧೯೬೫ ರಿಂದ ಹಿಡಿದು ೧೯೭೫ರವರೆಗೆ ಯಾರು ಯಾರು ಮಂತ್ರಿಗಳಾಗಿದ್ದರು, ಯಾರು ಯಾರು ಚೇರ್‌ಮನ್, ಆಗಿದ್ದರು, ಯಾರು ಯಾರು ಅಧಿಕಾರಿಗಳು ಇದ್ದರು, ಮತ್ತು ಅವರುಗಳ ಜವಾಬ್ದಾರಿ ಈ ಬಗ್ಗೆ ಎಷ್ಟೆಷ್ಟು ಇದೆ ಎಂಬುದನ್ನು ಮೊದಲು ನಿಗದಿ ಮಾಡೋಣ. ಹಿಂದಿನ ಮಂತ್ರಿಗಳ ಜವಾಬ್ದಾರಿ ಎಷ್ಟಿದೆ ಈಗಿನ ಮಂತ್ರಿಗಳ ಜವಾಬ್ದಾರಿ ಎಷ್ಟಿದೆ ಎಂಬುದನ್ನು ಮೊದಲು ನಿಗದಿ ಮಾಡೋಣ, ಯಾರು ಯಾರು ಎಷ್ಟೆಷ್ಟು ಹಣ ಹೊಡೆದಿದ್ದಾರೆಂಬುದನ್ನು ಕಂಡುಕೊಳ್ಳುವ ಸಲುವಾಗಿ ಒಂದು ಕಮಿಟಿ ಮಾಡಿ ಎಂದು ನಾನು ಹೇಳುತ್ತಿರುವುದು,

ಶ್ರೀ ಡಿ. ಕೆ. ನಾಯ್ಕರ್.—ಮಂತ್ರಿಗಳು ಇದರಲ್ಲಿ ಯಾವ ರೀತಿ ಬರುತ್ತಾರೆ ?

ಶ್ರೀ ಎಚ್. ಡಿ. ದೇವೇಗೌಡ.—ನಿಮಗೆ ಅದರ ವಾಸನೆ ಗೊತ್ತಿಲ್ಲ.

ಶ್ರೀ ಡಿ. ಕೆ. ನಾಯ್ಕರ್.—ಮಾತೆತ್ತಿದರೆ ಇವರು ಮಂತ್ರಿಗಳು, ಮುಖ್ಯಮಂತ್ರಿಗಳು ಎಂದು ಹೇಳುತ್ತಿರುತ್ತಾರೆ.

ಎಚ್. ಡಿ. ದೇವೇಗೌಡ.—ನಾನು ಹೇಳುವುದೇನೆಂದರೆ, ೧೯೬೫ ರಿಂದ ಹಿಡಿದು ೧೯೭೫ರವರೆಗೆ ಅಂದರೆ ಕಳೆದ ಹತ್ತು ವರ್ಷಗಳಲ್ಲಿ ಏನೇನು ವ್ಯವಹಾರಗಳು ನಡೆದಿದೆ ಎಂಬ ಬಗ್ಗೆ ನ್ಯಾಯಾಂಗ ತನಿಖೆ ನಡೆಸಿ ಎಂದು ಹೇಳಿದೆ, ಅದು ಸಾಧ್ಯವಾಗದಿದ್ದರೆ ಅಕೌಂಟೆಂಟ್ ಜನರಲ್, ಚೀಫ್-ಇಂಜಿನಿಯರ್ ಮತ್ತು ಹೈಕೋರ್ಟಿನ ಜಡ್ಜ್ ಒಬ್ಬರು ಇರುವಂತಹ ಒಂದು ಕಮಿಟಿ ರಚನೆ ಮಾಡಿ ಎಂದು ಹೇಳಿದೆ, ಅದಕ್ಕೂ ಆಗುವುದಿಲ್ಲವೆಂದರೆ, ಈ ಮನೆಯ ಸದಸ್ಯರಿಂದ ಕೂಡಿದ ಒಂದು ಹೌಸ್-ಕಮಿಟಿಯನ್ನು ಆದರೂ ಏತಕ್ಕೆ ರಚನೆ ಮಾಡಬಾರದು ?

SRI D. B. KALMANKAR.—As the hon. member Sri Devegowda has himself admitted that some of the matters are before the Vigilance Commission, let us wait till its report is received.

MR DEPUTY SPEAKER.—The scope of the resolution is limited.

SRI H. D. DEVEGOWDA.—I fully agree with hon. Deputy Speaker. The Government should agree to constitute a House Committee to go into this question. It is not at all big matter.

MR. DEPUTY SPEAKER.—We have to follow a proper procedure in such matters.

SRI H. M. CHANNABASAPPA.—I raise a point of order. I draw your attention to rule 135 of the rules of Procedure. The rule says.

" 135,-A resolution may be in the form a declaration of opinion, or a recommendation, or may be in the form so as to record either approval or disapproval by the Assembly of an Act or policy of Government ..." ಎಂದು ಹೇಳಿದೆ. ಈಗ ತಂದಿರತಕ್ಕ ನಿರ್ಣಯವಾದರೂ ಏನು ? ಬೆಂಗಳೂರು ನಗರದ ನಾಗರೀಕರಿಗೆ ನೀರಿನ ದರವನ್ನು ನಿಗದಿ ಮಾಡುವ ಬಗ್ಗೆ ಒಂದು ತಜ್ಞರ ಸಮಿತಿ ನೇಮಕ ಮಾಡಬೇಕು ಎಂಬುದು, ಅಂದರೆ ಇಲ್ಲಿ ತಜ್ಞರ ಸಮಿತಿಯನ್ನು ನೇಮಕ ಮಾಡಬೇಕೇ ಅಥವಾ ಬೇಡವೇ ಎಂಬುದು ಮುಖ್ಯವಾದ ಪ್ರಶ್ನೆ, ನೀರಿನ ದರವನ್ನು ಮೊಕರೂರು ಮಾಡುವುದಕ್ಕೆ ...

ಶ್ರೀ ಎಚ್. ಡಿ. ದೇವೇಗೌಡ.—ಅದನ್ನು ಯಾವ ಆಧಾರದ ಮೇಲೆ ಮಾಡಬೇಕು ಎಂಬುದು ಮೊದಲು ತೀರ್ಮಾನವಾಗಲಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲಿ ಅವ್ಯವಹಾರವಾಗಿದೆ ಎಂಬತಕ್ಕಂಥ ಒಂದು ವಿಷಯವನ್ನು ಹೇಳಿದ್ದಾರೆ. ಮತ್ತು ಇದಕ್ಕೆ ಎಷ್ಟು ಕೋಟಿ ರೂಪಾಯಿಗಳು ಖರ್ಚಾಗಿದೆ, ಮುಂದೆ ಅದರ ಮೇನ್

ಟೆನ್‌ಸ್ಸ್‌ಗೆ ಎಷ್ಟು ಖರ್ಚಾಗುತ್ತದೆ, ಯಾವ ಆಧಾರದ ಮೇಲೆ ದರವನ್ನು ನಿಗದಿ ಮಾಡಬೇಕು ಎಂಬ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿ ಮೂಲ ಪ್ರಶ್ನೆ ಇರುವುದು ನೀರಿನ ದರವನ್ನು ನಿಗದಿ ಮಾಡುವ ಬಗ್ಗೆ ಒಂದು ಕಮಿಟಿ ರಚನೆ ಮಾಡಬೇಕೇ ಅಥವಾ ಬೇಡವೇ ಎಂಬುದು, ಅದನ್ನು ಮಾಡಲೇ ಬೇಕೆಂದು ತಾವು ವಾದ ವಿವಾದ ಮಾಡಬಹು*ು, ಮತ್ತು ಸರ್ಕಾರ ಅದು ಅನಾವಶ್ಯಕ ಎಂದು ವಾದ ವಿವಾದ ಮಾಡಬಹುದು, ಆದರೆ ಕೊನೆಯ ತೀರ್ಮಾನ ಈ ಸಭೆಗೆ ಬಿಟ್ಟಿದ್ದು.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯಲ್ಲಿರತಕ್ಕಂಥ ಸದಸ್ಯರು ಯಾರಾದರು ದುಡ್ಡು ಹೊಡೆಯಿರಿ ಎಂದು ಏನಾದರು ಹೇಳಿದ್ದಾರೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ. —ಇಲ್ಲಿ ಅವ್ಯವಹಾರವಾಗಿದೆ ಎಂಬುದು ಒಂದು ವಿಷಯ, ಆ ಬಗ್ಗೆ ಚರ್ಚೆ ಮಾಡಲು ಪ್ರತ್ಯೇಕವಾದ ಒಂದು ನಿರ್ಣಯ ತೆಗೆದುಕೊಂಡು ಬನ್ನಿ, ಅದಕ್ಕೆ ನಮ್ಮ ಅಡ್ಡಿ ಏನೂ ಇಲ್ಲ, ಆದರೆ ತಾವು ಹೇಳುತ್ತಿರುವುದಕ್ಕೂ ಮೂಲ ನಿರ್ಣಯಕ್ಕೂ ಯಾವುದೇ ಸಂಬಂಧವಿಲ್ಲವೆಂದು ನಾನು ಹೇಳುತ್ತೇನೆ. It will not be in order to mix up the two things. It is open to you to bring it in the proper form within the framework of the rules and move the same for a discussion.
ಇಷ್ಟು ಮಾತ್ರ ನಾನು ಹೇಳುತ್ತೇನೆ.

ಶ್ರೀ ಎಚ್ ಡಿ. ದೇವೇಗೌಡ.—ಇಲ್ಲಿ ಕರಾರುವಕ್ಕಾಗಿ ಎಷ್ಟು ಖರ್ಚಾಗಿದೆ, ಎಷ್ಟು ಅವ್ಯವಹಾರ ನಡೆದಿದೆ ಎಂಬುದನ್ನು ಪರಿಶೀಲಿಸಲು ಒಂದು ಕಮಿಟಿಯನ್ನು ಮೊದಲು ರಚನೆ ಮಾಡಿ, ಅದರ ವರದಿ ಬಂದ ನಂತರ ನೀರಿನ ದರವನ್ನು ನಿಗದಿ ಮಾಡುವುದು ಒಳ್ಳೆಯದೆಂದು ನನ್ನ ಸಲಹೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಬಗ್ಗೆ ತಾವು ಪ್ರತ್ಯೇಕವಾದ ಒಂದು ನಿರ್ಣಯ ತೆಗೆದು ಕೊಂಡು ಬನ್ನಿ.

SRI H. D. DEVEGOWAA.—While constituting a Technical Committee to decide this issue of water rate, you can indicate the terms of reference. ಆ ರೀತಿ ಮಾಡುವುದಕ್ಕೆ ಏನು ಕಷ್ಟವಿದೆ ? ಸಮಿತಿಯವರ ಕರ್ತವ್ಯ ಗಳೇನು ಎಂಬುದನ್ನು ತಿಳಿಸಿಬಿಟ್ಟರೆ, ಅವರು ಅದರಂತೆ ಕೆಲಸ ಮಾಡಿ ತಮ್ಮ ವರದಿ ಕೊಡುತ್ತಾರೆ, ನಂತರ ಅದರ ಒಂದು ಆಧಾರದ ಮೇಲೆ ನೀರಿನ ದರವನ್ನು ನಿಗದಿ ಮಾಡುವ ಬಗ್ಗೆ ಸರ್ಕಾರದವರು ಶಿಫಾರಸ್ ಮಾಡಬಹುದು.

SRI H. M. CHANNABASAPPA.—The concerned Minister has made a statement. ದುಡ್ಡು ಹೊಡೆದಿದ್ದಾರೆಂದು ತಾವು ಹೇಳುವುದಾದರೆ ಆ ಬಗ್ಗೆ ಒಂದು ಪ್ರತ್ಯೇಕವಾದ ನಿರ್ಣಯ ತೆಗೆದುಕೊಂಡು ಬನ್ನಿ, ಆದರೆ ಒಂದಕ್ಕೊಂದಕ್ಕೆ ಬೆರೆಸುವುದು ಸರಿಯಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ತಮ್ಮ ಬಾಯಲ್ಲಿ ಆ ವಿಷಯ ಬರಬಾರದು, ನಾವು ಹೇಳುವು ದನ್ನು ಒಪ್ಪಿ ಕೊಳ್ಳುವುದಕ್ಕೆ ಇಷ್ಟವಿಲ್ಲದಿದ್ದರೆ ತಾವು ಸುಮ್ಮನೆ ಕುಳಿತುಕೊಳ್ಳಿ.

H. M. CHANNABASAPPA.—It would not be proper to discuss thos, matters for the purpose of the committee for determing the water ratei You may bring a motion in a proper form. It is not open to Sre Devegowda to comment on certain things which are not relevant for the purpose.

MR. DEPUTY SPEAKER.—Even a moment earlier when the hon. Minister raised the point of order, I had given a directive that we should restrict to the Resolution and not go beyond. I had also Stated if a specific demand is there, it should come in the proper from. The samething has been stated by the hon. Minister which I had stated earlier. It will be treated as reply. I uphold the point of order.

SRI KAGODU THIMMAPPA. -I am not questioning your ruling. I draw your attention to....

MR DEPUTY SPEAKER-Let us not waste our time. I would request the Hon. Members to see what exactly are my powers. I have to go by the rules of procedure which are adopted by the House. It is a bible. I annot ask anybody to reply in a particular manner. Can I do that ? I now call upon the hon. Member Sri Shamanna to reply.

SRI T. R. SHAMANNA.—Mr, Speaker Sir....

SRI KAGODU THIMMAPPA.—We expect a proper reply from the Government,

MR. DEPUTY SPEAKER.—The Government has replied. It wil amount to repeating the same thing again and again.

ಶ್ರೀ ಕಾಗೋಡು ತಿಮ್ಮಪ್ಪ.—ಕೋಟಿಗಟ್ಟಲೆ ಹಣ ಅನಾವಶ್ಯಕವಾಗಿ, ವೆಚ ವಾಗಿರುವುದರಿಂದ, ಅದನ್ನು ತನಿಖೆ ಮಾಡಿಸಿದರೆ ನೀರಿನ ದರ ಕಡಿಮೆ ಆಗಬಹುದು.

MR. DEPUTY SPEAKER.—The hon. Member may come to his own conclusions.

SRI H. D. DEVE GOWDA.—If the Government is really anxious to expose the persons who are responsible for this whole episode. whether they are officials or non-officials, I am prepared to send an amendment

MR. DEPUTY SPEAKER.—It has got its own procedure.

ಶ್ರೀ ಎಚ್. ಡಿ. ದೇವೇಗೌಡ.—ಅಮೆಂಡ್‌ಮೆಂಟನ್ನು ನಿಮಗೆಕಳಿಸುತ್ತೇನೆ. ಅದಕ್ಕೆ ಏನು ರಾಹುಕಾಲ ಗುಳಿಕಾಲ ಏನು ಬೇಕಾಗಿಲ್ಲ, ಅವರದು ನಮ್ಮದು ಗುರಿ ಒಂದೆ. ಕಳ್ಳರನ್ನು ಪತ್ತೆ ಹಚ್ಚುವುದರಲ್ಲಿ ಮುಂಹೂರ್ತ ಬೇಡ. ಒರಿಜಿನಲ್ ಮೋಷನ್‌ಗೆ ಅಮೆಂಡ್‌ಮೆಂಟ್ ಇದೆ, ಅದನ್ನು ಕಳಿಸುತ್ತೇನೆ.

MR. DEPUTY SPEAKER.—It should have come earlier.

SRI H. D. DEVE GOWDA.—Please do not give shelter to the Government.

SRI D. B. KALMANKAR.—If it comes with the rules it is all right.

SRI H. M CHANNABASAPPA.—We want everything to be done in accordance with the rules.

SRI H. D. DEVE GOWDA:—We wish to move a motion seeking to appoint a House Committee to go into the charges made by the Leader of the Opposition on the Bangalore Water Supply Board while implementing the Cauvery Water Supply Scheme and fix the responsibility.

MR. DEPUTY SPEAKER.—When there is a resolution moved by a member, any other member has a right to move an amendment. But it must come immediately after it is moved. Now there have been very exhaustive and learned speeches and the reply has also been given by the Government and the hon. member Sri Shamanna has already commenced his reply.

SRI H. D. DEVE GOWDA.—No, you have only called him.

SRI T. R. SHAMMANMA. —I only said "Mr. Speaker, Sir."

MR. DEPUTY SPEAKER.—I can see better than any of the hon. Member's He has commenced his reply. The words he has uttered mean that he has commenced. So, at this stage I cannot accept any amendment. Moreover, if anything is to come to me in the manner in which it is given, it has to be processed. This is not the proper occassion for that. The Leader of the Opposition asked me not to shelter to the Government. I will not give shelter to anybody.

SRI S. M. KRISHNA.—It is obligatory on our part to give shelter to the rules of procedure.

SRI H. D. DEVE GOWDA.—We are interested in eradicating corruption and finding out culprits.

SRI S. M. KRISHNA —We share that concern,

SRI H. D. DEVE GOWDA.-This is much more important than taking shelter under the rules.

MR. DEPUTY SPEAKER.—It is none of my task to give shelter to anybody. I have a fund of goodwill for every hon. Member. The of procedure is ths only canopy and shelter of the Presiding Officers which they are bound to adhere to and implement to the best of their ability. I felt a little hurt when he said that I should not give shelter to the Government.

SRI H. D. DEVE GOWDA.—I have tha highest respect for the Speaker and the Deputy Speaker. the Government want to take some evasive stand. the question of processing my amendment will arise only if the Government is particular about processing this issue. Ultimately they have to take a decision whether we are really interested to find out who are all the persons who are responsible for all this mal-administration in the Board and for the swindling of Government money to the extent of Rs 6 to 7 crores. We shall expose them. So, why dont't you straighaway say that we will form a House Committee.

ಶ್ರೀ ಸಿ. ಬೈರೇಗೌಡ.—ಮೋಷನ್ ತಂದರೆ ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ ಎಂದ ಹೇಳಿದ್ದಾರೆ ಈಗ ಮೋಷನ್ ಕಳಿಸಿದ್ದೇವೆ, ಅದನ್ನು ಸರ್ಕಾರದವರು ಒಪ್ಪಿಕೊಳ್ಳಲಿ.

MR. DEPUTY SPEAKER.—All along I have been attentive to what the Leader of the Opposition said and I do not want anybody to repeat it and second it. Why waste the time of the House ?

SRI H. D. DEVE GOWDA.—They have wasted Rs. 5-6 crores. So' it does not matter if we waste five minutes to fight for a just cause.

ಶ್ರೀ ಹೆಚ್. ಎಂ ಚನ್ನಬಸಪ್ಪ.—ವಿಧಿ ನಿಯಮಗನುಗುಣವಾಗಿ ಕೆಲಸ ನಡೆಯಬೇಕು.. ತಾವು ಕಳುಹಿಸದ ನಿರ್ಣಯವನ್ನೂ ಮಂಡಿಸುವುದಕ್ಕೆ ಸ್ಪೀಕರ್‌ರವರು ಅನುಮತಿಕೊಟ್ಟರೆ ಅದರಲ್ಲಿ ನಮ್ಮ ಅಭ್ಯಂತರ ಏನೂ ಇಲ್ಲ. ಯಾವ ತಪ್ಪಿತಸ್ಥರನ್ನೂ ಷೀಲ್ಡ್ ಮಾಡಬೇಕೆಂಬ ಇಚ್ಛೆ ನಮಗೆ ಎಳ್ಳಷ್ಟೂ ಇಲ್ಲ, ಈಗ ಅವರು ಅನುಮತಿಕೊಡದೆ ಹೋದರೂ ಸಹ ವಿಧಿ ನಿಯಮಗಳಿಗನುಗುಣವಾಗಿ ಒಂದು ನಿರ್ಧಿಷ್ಟವಾದ ನಿರ್ಣಯವನ್ನು ತಾವು ತಂದರೆ ಅದರ ಮೇಲೆ ಚರ್ಚೆ ನಡೆಯಲು ಅಡ್ಡಿ ಇಲ್ಲ. ಅದನ್ನು ಬಿಟ್ಟು ನಮ್ಮನ್ನು ಏತಕ್ಕೆ ಆಕ್ಷೇಪಣೆ ಮಾಡಬೇಕು.

ಶ್ರೀ ಹೆಚ್. ಡಿ. ದೇವೇಗೌಡ —ನೀವು ಭಂಡಬಿದ್ದಿದ್ದೀರಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ದೇವೇಗೌಡರಿಗೇ ಒಂದು ಹೊಸ ರೂಲ್ಸ್ ಎಂದು ಕಾಣುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—೧೩೯ನೇ ನಿಯಮದ ಪ್ರಕಾರ ಒಂದು ದಿವಸ ಮುಂಚಿತವಾಗಿ ನೋಟೀಸ್ ಕೊಡಬೇಕೆಂದಿದೆ. ಅದನ್ನು ಅವರು ಮರೆತುಬಿಟ್ಟಿದ್ದಾರೆಂದು ಕಾಣುತ್ತದೆ.

SRI D B. KALMANKAR.—Amendment has tc be moved one day earlier. We are also equally anxious.

12-Noon

SRI H. D. DEVEGOWDA.—Even the rules can be suspended The House has got the power.

Mr. DEPUTY SPEAKER.—Let me not be compelled to repeat what I have stated. We have known the positions taken by both the sides. Any confrontation willlead us nowhere.

† SRI T. R. SHAMANNA.—(Fort) Mr. Deputy Speaker, through you I heartily congraulate Sri Naikar for ably conducting and arguing on behalf of a murderer He is an able lawyer and he knows how to argue a case of murder in a court. I congratulate him for that purpose. In the first instance he referred to free allowance. Free allowance did not come up. The only mention made was that free allowance was decided by the Government and no decision should be taken to withdraw. I had to say so because the Administrator had pased an order and latter on he reversed it. ಮುಂದೆ ಪಬ್ಲಿಕ್ ಫೌಂಟನ್ಸ್ ಬಗ್ಗೆ ಹೇಳುವಾಗ ಈ ಹೇಳಿಕೆ ಸರಿಯಾಗಿಲ್ಲವೆಂದು ಅವರು ಹೇಳಿದರು, ಆದರೆ ಆರ್ಡರ್ ಆಗಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ, ಅದು ಈ ರೀತಿ ಇದೆ. Copy of the letter No TSDS 578 dated 11th July 1974 addressed by the Eogineer to the Assistant Engineers.

"Order of the Commissioner 50% of the public fountains to be removed"

50% means they may be in a locality where rich people live or poor people live. A number of taps have been closed and we prayed that public foundains that are situated in the places where rich people live may be removed and where poor people live may be retained. Our arguements were more about the rate than the public fountains. The Hon. Minister was not able to reply about that. ಕಾರ್ಪೊರೇಷನ್ ರೆಕಾರ್ಡ್‌ನಲ್ಲಿ ಎಲ್ಲ ವಿವರಗಳೂ ಇವೆ. ಮೊದಲು ೭೫ ಲಕ್ಷ ರೂಪಾಯಿಗಳನ್ನು ಕೊಡುತ್ತಾ ಇದ್ದಂಥಾದ್ದು ಈ ಕಾವೇರಿ ನೀರು ಬಂದಮೇಲೆ ೨೦೦ ಲಕ್ಷ ರೂಪಾಯಿ ಹೆಚ್ಚಿಗೆ ಕಾರ್ಪೊರೇಷನ್ ನವರು ಕೊಡಬೇಕಾಗಿದೆ.

ಮುಂದೆ ೭೫ ಲಕ್ಷ ರೂಪಾಯಿ ಕೊಡಬೇಕಾದ್ದು ೨ ಕೋಟಿಗಿಂತ ಹೆಚ್ಚಿಗೆ ಬಂದಾಗ ಆ ಹೊರೆ ನಮ್ಮ ಮೇಲೆಯೇ ಬೀಳುತ್ತದೆ. ಇದರಿಂದಾಗಿ ನಗರದ ನಾಗರೀಕರಿಗೆ ಕೊಡಬೇಕಾದ ಸೌಲಭ್ಯಗಳು ಮೊಟಕಾಗುತ್ತದೆ. ಸರಿಯಾದ ನ್ಯಾಯವಾದ ದರವನ್ನು ಗೊತ್ತು ಮಾಡಿದರೆ ಇದರಲ್ಲಿ ಉಳಿದ ಹಣದಲ್ಲಿ ನಾಗರೀಕರಿಗೆ ಒಳ್ಳೆಯ ಸೌಲಭ್ಯಗಳನ್ನು ಒದಗಿಸಿ ಕೊಡುವುದಕ್ಕೆ ಅನುಕೂಲವಾಗುತ್ತದೆ. ನಾನು ಯಾವತ್ತೂ ಕೂಡ ಮಾತನಾಡುವಾಗ ಅಂಕಿ ಅಂಶಗಳಿಲ್ಲದೆ, ಸರಿಯಾದ ಅಧಾರವಿಲ್ಲದೆ, ಸತ್ಯಕ್ಕೆ ದೂರವಾದ ಮಾತುಗಳನ್ನು ಆಡುವುದಕ್ಕೆ ಹೋಗುವುದಿಲ್ಲವೆಂಬುದನ್ನು ಸ್ಪಷ್ಟಪಡಿಸಬಯಸುತ್ತೇನೆ. ಮಾನ್ಯ ದೇವೇಗೌಡರು ಹೇಳಿರುವಂತೆಯೇ ಇದರಲ್ಲಿ ಸುಮಾರು ೩ ಕೋಟಿ ರೂಪಾಯಿಯ ಅವ್ಯವಹಾರ ಆಗಿದೆ.

ಇನ್ನು ಎರಡನೆಯದಾಗಿ ತೀರ್ಮಾನ ಆಗಬೇಕಾದ್ದು ಅಂದರೆ ಮಾನ್ಯ ದೇವೇಗೌಡರು ತಪ್ಪು ಹೇಳಿಕೆಯನ್ನು ಕೊಟ್ಟಿದ್ದರೆ ಅವರ ಮೇಲೆ ಪ್ರಿವಿಲೇಜ್ ಮೋಷನ್‌ನ್ನು ತಂದು ಅವರನ್ನು ಹೊರಹಾಕಿ, ಇಲ್ಲ ಮಿನಿಸ್ಟರ್‌ರವರದ್ದು ತಪ್ಪಾಗಿದ್ದರೆ ಅವರನ್ನು ಆಚೆಗೆ ಕಳುಹಿಸಬೇಕು. ಈ ೩ ಕೋಟಿ ರೂಪಾಯಿ ವಿಷಯ ಸಾಮಾನ್ಯವಾದುದಲ್ಲ. ಜವಾಬ್ದಾರಿಯುಳ್ಳ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರತಕ್ಕ ವಿಚಾರದಲ್ಲಿ ಎಷ್ಟು ಅವ್ಯವಹಾರವಾಗಿವೆ ಎಂದು ಹೇಳುವುದಕ್ಕಾಗುವುದಿಲ್ಲ, ಆದುದರಿಂದ ನಾನು ಹೇಳುವುದೇನೆಂದರೆ ಒಂದು ಕಮಿಟಿಯನ್ನು ಮಾಡಿ ಮಾನ್ಯ ದೇವೇಗೌಡರನ್ನು ಹೊರಹಾಕುವುದಕ್ಕೆ ಏರ್ಪಾಡು ಮಾಡಿ, ಇಲ್ಲದೇ ಹೋದರೆ ನೀವು ಮಾಡಿರತಕ್ಕ ತಪ್ಪನ್ನು ಒಪ್ಪಿಕೊಳ್ಳಿ. ಮಾನ್ಯ ದೇವೇಗೌಡರು ಬಹಳ ದೊಡ್ಡ ಆರೋಪವನ್ನು ಮಾಡಿದ್ದಾರೆ, ಈಗ ಇವರು ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಯಾವುದೋ ಒಂದು ಕುಂಟು ನೆಪವನ್ನು ಹುಡುಕುತ್ತಿದ್ದಾರೆ. ಆದುದರಿಂದಲೇ ಮಾನ್ಯ ನಾಯ್ಕರ್‌ರವರು ಉತ್ತರವನ್ನು ಕೊಡುವಾಗ ಸರಿಯಾದ ಉತ್ತರವನ್ನು ಕೊಡಲಿಲ್ಲ. ನಾನು ಆಗಲೇ ಹೇಳಿದಹಾಗೆ ಅವರು ಕ್ರಿಮಿನಲ್ ಲಾಯರ್. ಬಹಳ ಚೆನ್ನಾಗಿ ಆರ್ಗ್ಯೂ ಮಾಡುವ ಶಕ್ತಿ ಅವರಿಗೆ ಇದೆ. ಮರ್ಡರ್ ಆಗಿರತಕ್ಕ ಕೇಸ್‌ನಲ್ಲೂ ಕೂಡ ಮರ್ಡರರ್‌ನ್ನು ಅವನು ಮಾಡಿಲ್ಲವೆಂದು ವಾದಮಾಡುತ್ತಾರೆ. ಏಕೆಂದರೆ ಅವರು ಫೀಸ್ ತೆಗೆದುಕೊಂಡಿರುತ್ತಾರೆ. ಇದರ ಬಗ್ಗೆ ಬಹಳ ಚೆನ್ನಾಗಿ ಆರ್ಗ್ಯೂ ಮಾಡಿದ್ದಾರೆಂದು ಮಾತ್ರ ನಾನು ಒಪ್ಪಿಕೊಳ್ಳುತ್ತೇನೆ.

ಎರಡನೆಯದಾಗಿ ಬೋರ್ಡ್ ಅಟಾನಮಸ್, ಆದಕಾರಣ ಸರ್ಕಾರಕ್ಕೆ ಅದರ ಮೇಲೆ ಹೆಚ್ಚಿನ ಅಧಿಕಾರವಿಲ್ಲವೆಂದು ಹೇಳಿದರು, ಆದರೆ ವಾಟರ್ ಬೋರ್ಡಿಗೆ ಕೊಟ್ಟಿರತಕ್ಕ ೩೬ ಕೋಟಿ ಸಾಲ, ಸರ್ಕಾರ ಮಂಜೂರಾತಿ ಮಾಡಿರತಕ್ಕ ಹಣ. ಇದರಲ್ಲಿ ಯಾವುದಾದರೂ ಹೆಚ್ಚು ಕಡಿಮೆ ಯಾದ ಪಕ್ಷದಲ್ಲಿ, ಸರ್ಕಾರ ಈ ಹಣಕ್ಕೆ ಗ್ಯಾರಂಟಿ ಕೊಟ್ಟಿರುವುದರಿಂದ ನೇರವಾಗಿ ಸರ್ಕಾರವೇ ಜವಾಬ್ದಾರಿಯಾಗುತ್ತದೆ. ವಾಟರ್ ಬೋರ್ಡ್‌ನ ಕಮಿಟಿಗೆ ಸದಸ್ಯರನ್ನು ಅಪಾಯಿಂಟ್ ಮಾಡತಕ್ಕವರು ಸರ್ಕಾರದವರು, ಅಲ್ಲಿರತಕ್ಕ ಅಧಿಕಾರಿಗಳು ಸರ್ಕಾರದ ಅಧಿಕಾರಿಗಳು, ಆದುದರಿಂದ ಸರ್ಕಾರದ ಹೊಣಗಾರಿಕೆ ಮೇಲಿನಿಂದ ಕೊನೆಯವರಿಗೂ ಇದೆ. ಏತಕ್ಕೆಂದರೆ ವಾಟರ್ ಬೋರ್ಡ್ ಟೆಂಡರು ಅಕ್ಸೆಪ್ಟ್ ಮಾಡಿದಾಗ ಕ್ಯಾಬಿನೆಟ್ ಡಿಸ್‌ಕಷನ್ ತೆಗೆದುಕೊಂಡು ಅದರ ಪ್ರಕಾರ ಪ್ರಿಸ್ಟ್ರೆಸ್ಡ್ ಕಾಂಕ್ರಿಟ್ ಬದಲಾಗಿ ಸ್ಟೀಲ್ ಪೈಪ್ ಹಾಕಬೇಕು ಎಂದು ಕ್ಯಾಬಿನೇಟ್ ತೀರ್ಮಾನ ಆಯಿತು. ಅದರ ಮೇಲೆ ಅವರು ತೀರ್ಮಾನ ತೆಗೆದುಕೊಂಡಿದ್ದಾರೆ. ಇಲ್ಲಿ ಏನಾದರು ತಮಗೆ ಅನಾನುಕೂಲವಾದರೆ ವಾಟರ್ ಬೋರ್ಡ್ ಅಟಾನಮಸ್ ಎಂದು ಹೇಳಿ ಸುಲಭವಾಗಿ ತಪ್ಪಿಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ಆಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದರ ಜೊತೆಗೆ ನೀರಿಗೆ ಸಂಬಂಧಪಟ್ಟಂತೆ ಫ್ರೀಲೈನ್ಸ್, ಪಬ್ಲಿಕ್‌ಕೌಂಟಿನ್ಸ್, ಕಾರ್ಪೊರೇಷನ್‌ಗೆ ಸಂಬಂಧಪಟ್ಟದ್ದು ನಮಗೆ ಸಂಬಂಧಪಟ್ಟದ್ದಲ್ಲವೆಂದು ಸುಲಭವಾಗಿ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಜೊತೆಗೆ ವಾಟರ್ ಸಿವರೇಜ್ ಬೋರ್ಡ್ ಚೇರ್‌ಮನ್ ಕಾರ್ಪೊರೇಷನ್ ಅಡ್ಮಿನಿಸ್ಟ್ರೇಟರ್ ಈ ಎಲ್ಲ ಅಧಿಕಾರಿಗಳು ಸರ್ಕಾರಿ ಅಧಿಕಾರಿಗಳೇ ಇರುವಾಗ, ಅಲ್ಲಿ ತೆಗೆದುಕೊಳ್ಳತಕ್ಕ ತೀರ್ಮಾನವೇನು ಇದೆ ಅದು ಕಾರ್ಪೊರೇಷನ್‌ಗೆ ಸಂಬಂಧಪಟ್ಟದ್ದು ಎಂದು ಹೇಳಿ ಅದು ಅಟಾನಮಸ್‌ಬಾಡಿ ಎಂದು ನೆಪ ಹೇಳಿ ಸುಲಭವಾಗಿ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಸ್ಪಷ್ಟಪಡಿಸುತ್ತೇನೆ. ಶ್ರೀಮಾನ್ ನಾಯ್ಕರವರು ಹೇಳಿದರು, ಭಗೀರಥ ಪ್ರಯತ್ನ ಮಾಡಿ ಯಾವರೀತಿ ಭಗೀರಥ ದೇವಲೋಕದಿಂದ ಗಂಗೆಯನ್ನು ಭೂಲೋಕಕ್ಕೆ ತಂದ, ಅದೇ ರೀತಿಯಲ್ಲಿ ಕಾವೇರಿಯನ್ನು ತಂದು ಇಳಿಸಿ ಬಿಟ್ಟಿದ್ದೇವೆಂದು ಹೇಳಿ ಅಲ್ಲಿ ಆಗಿರತಕ್ಕ ಅಪವ್ಯಯಗಳಿಗೆ, ಮತ್ತು ಅವ್ಯವಹಾರಗಳಿಗೆ ಪಕ್ಷ ಹೊರತಾಗಿದೆಯೆಂದು ಹೇಳಿದರೆ ಹೊರತು, ಇದನ್ನು ಸಾಪನೆ ಮಾಡುವುದಕ್ಕೆ ಯಾರು ಕಾರಣರು ಅವರ ಬಗ್ಗೆ ಒಂದಾದರೂ ಒಳ್ಳೆಯ ಮಾತು ಬೇಡವೇ? ಮಾನ್ಯ ನಿಜಲಿಂಗಪ್ಪನವರು ಎಷ್ಟೇ ಹಣದ ಕೊರತೆ ಇರಲಿ, ಕಾವೇರಿ ನೀರನ್ನು ಬೆಂಗಳೂರಿಗೆ ತರುವುದಕ್ಕೆ ತೀರ್ಮಾನ ತೆಗೆದುಕೊಂಡು ಸಾಕಾದಷ್ಟು ಸಹಾಯ ಮಾಡಿದ್ದಾರೆ. ಮಾನ್ಯ ಹನುಮಂತಯ್ಯನವರು ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳಾಗಿದ್ದಾಗ ವಿಪುಲವಾಗಿ ಕಷ್ಟಪಟ್ಟು ಈ ಕೆಲಸ ನಡೆಯುವ ಸಮಯದಲ್ಲಿ ಬಹಳವಾಗಿ ಉಪಕಾರ ಮಾಡಿದ್ದಾರೆ.

Mr. DEPUTY SPEAKER.—The hon. Member has to meet those arguments which were advanced and also be brief.

ಶ್ರೀ ಟಿ. ಆರ್. ಶಾಮಣ್ಣ.—ಶ್ರಿ ನಾಯ್ಡುರವರು ಹೇಳಿದರು ಶ್ರೀ ಬಸವಲಿಂಗಪ್ಪನವರು ಅಧಿಕಾರಿಗಳಿಗೆ ಕುಮ್ಮಕ್ಕು ಕೊಟ್ಟಿದ್ದಾರೆಂದು.

ಶ್ರೀ ಎಚ್. ಡಿ. ದೇವೇಗೌಡ.—ಶ್ರೀ ನಿಜಲಿಂಗಪ್ಪನವರಿಗೆ ಇನ್‌ವಿಟೇಷನ್ ಕೂಡ ಕೊಟ್ಟಿರಲಿಲ್ಲ

ಶ್ರೀ ಟಿ. ಆರ್. ಶಾಮಣ್ಣ —ಶ್ರೀ ಹನುಮಂತಯ್ಯನವರು ಸ್ಥಳ ಒದಗಿಸುವುದಕ್ಕೆ ಸಹಾಯ ಮಾಡಿದ್ದಾರೆ. ನಾಗರೀಕರು ಸಹಾಯ ಮಾಡಿದ್ದಾರೆ. ಬೆಂಗಳೂರು ನಗರಕ್ಕೆ ಕಾವೇರಿ ನೀರನ್ನು ತರುವುದಕ್ಕೆ ಸರ್ಕಾರದವರೇ ಆಗಲಿ ಬೇರೆ ಯಾರ್‍ಯಾರು ಸಹಾಯಕರಾಗಿದ್ದಾರೆ ಅವರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ. ಉಪಕಾರದ ರೀತಿಯಲ್ಲಿ ಹೊರೆಯನ್ನು ಹಾಕಬೇಕು ಹೊರತು, ಅದು ನಾಗರಿಕರಿಗೆ ತಡೆಯಲಾರದ ಹೊರೆಯಾಗಬಾರದೆಂದು ಮಾತ್ರ ಹೇಳುತ್ತೇನೆ. ಈಗ ತಂದಿರತಕ್ಕ ನಿರ್ಣಯದ ಬಗ್ಗೆ ಈ ದಿನ ಮುಖ್ಯ ಮಂತ್ರಿಗಳು ಸಂಲಭವಾಗಿ, ಬಹಳ ಲಘುವಾಗಿ ಮಾತನಾಡತಕ್ಕ ಸ್ವಭಾವವನ್ನು ಕಲ್ಪಿಸಿಕೊಂಡಿದ್ದಾರೆ. ಕಾವೇರಿ ನೀರಿನ ಪ್ರಾಜೆಕ್ಟ್ ಆರಂಭವಾಗುವಾಗ ಅವತ್ತಿನ ಮುಖ್ಯಮಂತ್ರಿಗಳು ಇನ್ಯಾಗುರೇಟ್ ಮಾಡಬೇಕಾಗಿತ್ತು. ನಾನು ಒಬ್ಬ ಇನ್‌ವೈಟಿಯಾಗಿ ಹೋಗಿದ್ದೆ. ಅದು ನನ್ನ ಏರಿಯಾದಲ್ಲಿಯೇ ನಡೆಯಿತು. ಅವತ್ತಿನ ದಿವಸ ಒಂದು ಚೀಟಿಯಲ್ಲಿ ಬರೆದು ಕಳುಹಿಸಿಕೊಟ್ಟೆ, ಏನೆಂದರೆ ಮಾನ್ಯ ಮಂತ್ರಿಗಳಿಗೆ ಕಾವೇರಿ ನೀರನ್ನು ಒದಗಿಸಿ ಕೊಟ್ಟಿದ್ದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ. ನಿಮ್ಮ ಉಪಕಾರ ಜನರಿಗೆ ಹೊರೆಯಾಗದೆ ಇರುವಹಾಗೆ ಜನರಿಗೆ ಸಹಾಯ ಮಾಡಬೇಕೆಂದು ಚೀಟಿಯಲ್ಲಿ ಬರೆದು ಕಳುಹಿಸಿಕೊಟ್ಟೆ. ಅಂದು ನನಗೆ ವಾರೆಂಟ್ ಇದ್ದುದರಿಂದ ಕೋರ್ಟಿಗೆಹೋಗಬೇಕಾಗಿತ್ತು, ಹೊರಟು ಹೋದೆ. ಆಗ ಮಾನ್ಯ ಮಂತ್ರಿಗಳು ಹೇಳಿದರು, ಶಾಮಣ್ಣನವರು ಹೊರಟುಹೋಗಿದ್ದಾರೆ, ದಯವಿಟ್ಟು ಅವರು ಬಂದಮೇಲೆ ಹೇಳಿ ಎಂದು ನಂತರ ನೀರಿನ ದರ ಹೆಚ್ಚಾಗಿ ಕೊಟ್ಟೇ ಕೊಡಬೇಕು, ಖರ್ಚು ಮಾಡಿದ್ದು ನಾಗರೀಕರು ಕೊಡುವುದಿಲ್ಲವೆಂದರೆ ಹೇಗೆ ಆಗುತ್ತದೆ, ಶಾಮಣ್ಣನವರಿಗೆ ಹೇಳಿ, ಸಂಲಭವಾಗಿ ಪಬ್ಲಿಕ್‌ಪ್ಲಾಟ್ ಫಾರಮ್‌ನಲ್ಲಿ ಭಾಷಣ ಮಾಡಿ ಓಟ್ ತೆಗೆದು ಕೊಳ್ಳತಕ್ಕ ವಿಚಾರ ಇಲ್ಲ ಎಂದು ಹೇಳಿದರು. ಅದೇ ರೀತಿಯಲ್ಲಿ ಮೆಯೋಹಾಲ್‌ನಲ್ಲಿ ಫಂಕ್ಷನ್ ನಡೆದಾಗಲೂ ಕೂಡ ತೆರಿಗೆಯನ್ನು ಹಾಕಲೇ ಬೇಕು ಎಂದು ಹೇಳಿದರು. ಆದರೆ ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಈಗಿನ ಮುಖ್ಯಮಂತ್ರಿಗಳು ಅದೇ ಜಾಗದಲ್ಲಿ ಕುಳಿತುಕೊಂಡು ಅಲ್ಲಿ ನಾನಾ ಅಕ್ರಮ ನಡೆದಿದೆ ಅಲ್ಲಿಯ ಚೇರ್‌ಮನ್ ಇಂಥಿಂಥಾದ್ದು ಮಾಡಿದ್ದಾರೆ ಎಂದು ಭಾಷಣಮಾಡಿ ವೀರೇಂದ್ರ ಪಾಟೀಲ್‌ರವರಿಗೆ ಕಾಗದ ಬರೆದಿದ್ದಾರೆ. ಇದರ ಬಗ್ಗೆ ವಿಚಾರಣೆ ಆಗಲೇಬೇಕು ಎಂದು ಬರೆದಿದ್ದಾರೆ, ಅದನ್ನು ಮಾನ್ಯ ದೇವೇಗೌಡರೂ ಕೂಡ ಓದಿದ್ದಾರೆ. ಮತ್ತು ಅದು ಪ್ರೊಸೀಡಿಂಗ್ಸ್‌ನಲ್ಲಿ ಇದೆ. ಅಷ್ಟು ಕಟುವಾಗಿ ಮಾತನಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸ್ನೇಹಿತರಿಗೆ ಒಂದು ಸಲಹೆ ಮಾಡುತ್ತೇನೆ, ಏನೆಂದರೆ ಚಾಮರಾಜ ಪೇಟೆ ಚುನಾವಣೆ ಬಂದಿದೆ, ಅಲ್ಲಿ ಇದನ್ನೆಲ್ಲಾ ಹೇಳಿದರೆ ಚುನಾವಣೆಯಲ್ಲಿ ಉಪಯೋಗವಾಗಬಹುದು.

ಶ್ರೀ ಟಿ. ಆರ್. ಶಾಮಣ್ಣ.—ಈಗ ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ, ಏನೆಂದರೆ, ನೀರಿನ ವ್ಯವಹಾರದಲ್ಲಿ ಸಾಕಾದಷ್ಟು ಅಕ್ರಮ, ಅನ್ಯಾಯ ಮತ್ತು ಹಣ ಲೂಟಿಯಾಗಿದೆ. ಕಮಿಟಿ ಮಾಡುವುದರಿಂದ ಹಣ ವ್ಯರ್ಥವಾಗುತ್ತದೆ ಎಂದು ಹೇಳಿದರು. ವೃತ್ತಿಯಲ್ಲಿ I am not a professional politician. ಭಗವಂತ ನನ್ನನ್ನು ಸಾಕಷ್ಟು ಅನುಕೂಲಸ್ಥಿತಿಯಿಂದ ಇಟ್ಟಿದ್ದಾನೆ. ಆದಕಾರಣ ನನ್ನ ಆಸ್ತಿ ಸ್ಪೀಕರ್ ರವರ ಕೈಯಲ್ಲಿ ಬರೆದು ಕೊಡುತ್ತೇನೆ. ನಾನು ಬೇಜವಾಬ್ದಾರಿಯಿಂದ ಯಾವುದಾದರೂ ಒಂದು ಹೇಳಿಕೆಯನ್ನು ಇಲ್ಲಿ ಕೊಟ್ಟಿದ್ದರೆ ನಾನು ಈ ಸಭೆಯಲ್ಲಿ ಇರುವುದಕ್ಕೆ ಲಾಯಕ್ಕು ಇಲ್ಲ, ನಾನು ರಾಜೀನಾಮೆ ಬರೆದು ಕೊಡುತ್ತೇವೆ, ಆದಕಾರಣ ಕಮಿಟಿಯನ್ನು ಏರ್ಪಾಡು ಮಾಡಿ, ಕಮಿಟಿಯಲ್ಲಿ ನಾನು ಹೇಳಿರುವುದು ಸರಿಯಾದುದಲ್ಲವೆಂದು ಗೊತ್ತಾದ ಪಕ್ಷದಲ್ಲಿ, ಕಮಿಟಿಗೆ ಖರ್ಚಾಗಿರುವುದಕ್ಕೆ ನನ್ನ ಆಸ್ತಿಯಿಂದ ತೆಗೆದುಕೊಳ್ಳಲಿ. ಮತ್ತು ನಾನು ಇಲ್ಲಿ ಮೆಂಬರಾಗುವುದಕ್ಕೆ ಲಾಯಕ್ಕು ಇಲ್ಲದ ಹಾಗೆ ಮಾಡಲಿ. ಇದನ್ನು ಒಪ್ಪಿಕೊಳ್ಳುವುದಕ್ಕೆ ನಾನು ತಯಾರಾಗಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ:—ಪ್ರೂವ್ ಆಗದೇ ಹೋದರೆ ಕಮಿಟಿಗೆ ಆಗತಕ್ಕ ಖರ್ಚು ಅವರೇ ವಹಿಸಿಕೊಳ್ಳುತ್ತೇನೆ ಎಂದು ಹೇಳುತ್ತಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ಅಡಿ ಇಲ್ಲ. ಅದಕ್ಕಾಗಿ ಬೇರೆ ರೆಸಲ್ಯೂಷನ್ ತನ್ನಿ.

SRI D. B. KALMANKAR,—He could have brought a resolution like that.

SRI H. M. CHANNABASSAPPA.—I cannot allow that to go un challenged. ನಾನು ಹೇಳತಕ್ಕದ್ದು ಇಷ್ಟೆ, ನಮಗೆ ಇದರಲ್ಲಿ ಯಾವ ಅಡ್ಡಿ ಇಲ್ಲ; ತಪ್ಪಿತಸ್ಥರನ್ನು ಶಿಕ್ಷೆ ಮಾಡಬೇಕು ಈ ವಿಷಯದಲ್ಲಿ ನಿಮಗೆ ಎಷ್ಟು ಅಭಿಮಾನವಿದೆಯೋ ನಮಗೂ ಅಷ್ಟೇ ಅಭಿಮಾನ ಇದೆ. ಆದರೆ ನಾವು ಸದನದ ರೂಲ್ಸಿಗೆ ವಿಧೇಯರಾಗಿ ನಡೆಯಬೇಕು. ತಾವು ಏನು ಚಾಲೆಂಜ್ ಮಾಡಿದಿರಿ ತಮ್ಮ ಅಭಿಪ್ರಾಯ ಏನಿದೆ. ಆ ಅಭಿಪ್ರಾಯವನ್ನು ಅಳವಡಿಸಿ ರೂಲ್ಸ್ ಪ್ರಕಾರ ಒಂದು ಮೋಷನ್ ಕಳುಹಿಸಿ. ಅದನ್ನು ಅಧ್ಯಕ್ಷರು ಒಪ್ಪಿದರೆ, ಚರ್ಚೆಯಾಗಲಿ.

ಶ್ರೀ ಎಚ್. ಡಿ. ದೇವೇಗೌಡ.—ಆ ಮೇಲೆ ಸಭೆಯಲ್ಲಿ ತೀರ್ಮಾನ ಮಾಡಲಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾರಿಗೆ ಶಿಕ್ಷೆಯನ್ನು ಮಾಡಬೇಕು ಎನ್ನುವುದರ ಬಗ್ಗೆ ಸಭೆ ತೀರ್ಮಾನ ಮಾಡುವುದು. ನಮಗೆ ಮುಖ್ಯವಾದಂಥ ತೊಂದರೆ ಏನಾಗಿದೆ ಎಂದರೆ. ವಾಟರ್ ಸಪ್ಲೈ ಬೋರ್ಡಿನವರು ಇಟ್ಟಿರತಕ್ಕ ಲೆಕ್ಕ ತಪ್ಪು ಲೆಕ್ಕ ಎಂದು ಎರಡು ಸಾರಿ ತೀರ್ಮಾನವಾಗಿದೆ. ಮೊದಲನೆಯ ದಾಗಿ ಸರ್ಕಾರದಿಂದ ಬಂದಂಥಾದ್ದು ೯ ಕೋಟಿ ರೂಪಾಯಿ ಇದ್ದುದು ೬ಕೋಟಿ ರೂಪಾಯಿಗೆ ಇಳಿಸಿದರು ಮತ್ತೆ ಎಸ್ಟಿಮೇಟ್ ಕಮಿಟಿಯವರು ೧ ಕೋಟಿ ೨೯ ಲಕ್ಷ ರೂಪಾಯಿ ಹೆಚ್ಚಾಗಿ ಲೆಕ್ಕ ಹಾಕಿದ್ದರು ಎಂದು ಪ್ರೂವ್ ಮಾಡಿದರು. ಮತ್ತೆ ೮೦ ಲಕ್ಷ ರೂಪಾಯಿ ನಷ್ಟವಾಗಿದೆ ಎನ್ನುವುದು ಸರಿಯಲ್ಲ; ೨೫ ಲಕ್ಷ ರೂಪಾಯಿ ಲಾಭ ಆಗಿದೆಯೆಂದು ಹೈಕೋರ್ಟ್‌ನಲ್ಲಿ ತೀರ್ಮಾನ ಆಗಿದ್ದು ಇದೆ ಅನೇಕ ಸಂದರ್ಭಗಳಲ್ಲ ಈ ವಾಟರ್ ಸಪ್ಲೈ ಬೋರ್ಡಿನವರು ಮಾಡಿರತಕ್ಕ ತೀರ್ಮಾನಗಳು ಸತ್ಯಕ್ಕೆ ದೂರುವಾದುದು. ಆ ರೀತಿ ವಿಪರೀತ ನಷ್ಟಮಾಡಿ ಜನರ ತಲೆಯಮೇಲೆ ಹೊರಿಸತಕ್ಕಂಥದ್ದನ್ನು ನಾವು ಮೂರು ಸಾರಿ ಬಿಡುಗಡೆ ಮಾಡಿಕೊಂಡಿದ್ದೇವೆ. ಈಗ ೩೬ ಕೋಟಿ ರೂಪಾಯಿಗಳಿಗೆ ಜನತೆ ಬಡ್ಡಿ ಕೊಡಬೇಕಾಗುತ್ತದೆ; ಆ ಖರ್ಚು ಎಲ್ಲಾ ನಾಗರೀಕರ ಮೇಲೆ ಬೀಳುತ್ತದೆ ಅಂಥಾದ್ದನ್ನು ಟ್ಯಾಕ್ಸು ಪೇಯರ್ ಆಗಿ ಏಕೆ ಕೊಡಬೇಕು ಎನ್ನುವುದರ ಬಗ್ಗೆ ನಾವು ಎತ್ತಿದ್ದೇವೆ. ಇದನ್ನು ಕಂಡುಹಿಡಿಯಬೇಕಾದ ಪಕ್ಷದಲ್ಲಿ ಒಂದು ಇಂಡಿಪೆಂಡೆಂಟ್ ಬಾಡಿ ಬೇಕಾಗುತ್ತದೆ. ಆದರೆ ಇದಕ್ಕೆ ಸರ್ಕಾರದ ನಿಲುವು ಏನು ಎಂದರೆ, ಎಲ್ಲಾ ಸರಿಯಾಗಿದೆ ಎಂದು ವಾದ ಮಾಡಿದರು; ಒಂದು ಕಡೆ ಕ್ರಮಬದ್ಧವಾಗಿದೆ ಎಂದು ಹೇಳುತ್ತಾರೆ. ಆದರೆ ಇಲ್ಲಿ ನಾವು ಲೂಟಿ ಯಾಗಿದೆ, ಅನ್ಯಾಯ ಆಗಿದೆ ಎಂದು ನಾವು ಹೇಳುತ್ತಿದ್ದೇವೆ. ಆದನ್ನು ತೀರ್ಮಾನ ಮಾಡದೇ ಇದ್ದ ಪಕ್ಷದಲ್ಲಿ ಸರ್ಕಾರ ಸುಲಭವಾಗಿ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿಯಲ್ಲೇ ನಿರ್ಣಯ ತಂದಿದ್ದರೆ ಚೆನ್ನಾಗಿ ಇತ್ತು. ಅಗತ್ಯ ವಾಗಿ ಪರ್ಯಾಲೋಚನೆ ಮಾಡುತ್ತಿದ್ದವು.

ಶ್ರೀ ಟಿ. ಆರ್. ಶಾಮಣ್ಣ.—ನಾನು ನಿರ್ಣಯ ತಂದಿರತಕ್ಕದ್ದು. A Committee may be appointed ಎಂದು.

SRI H M. CHANNABASAPPA —A Committee may be appointed to examine the allegations of corruption " ಎಂದು;

ಶ್ರೀ ಸಿ. ಬೈರೇಗೌಡ.—ಈ ರೀತಿ ಖರ್ಚು ಜಾಸ್ತಿ ಆಗಬೇಕಾದರೆ ಕಾರಣ ಏನು ಎಂದು ವಿವರಿಸಿದ್ದಿರಾ ?

ಶ್ರೀ ಟಿ. ಆರ್. ಶಾಮಣ್ಣ.—ಮೊದಲು ಮೂರು ವರ್ಷಗಳ ಹಿಂದೆ ವಾಟರ್ ಸಪ್ಲೈ ಬೋರ್ಡಿನವರು ಈ ನೀರಿನ ದರವನ್ನು ವಿಪರೀತವಾಗಿ ಹೆಚ್ಚಿಸಿದ್ದರಿಂದ ಅನೇಕ ಚಳುವಳಿಗಳು ನಡೆಯಿತು, ಆದರಿಂದಾಗಿ ನಾವು ಜೈಲ್‌ಗೆ ಹೋಗಿ ಏಟು ತಿಂದೆವು. ಆ ಸಂದರ್ಭದಲ್ಲಿ ಕಾರ್ಪೊರೇಷನ್‌ನವರು ಪ್ರಾಪರ್ಟಿ ಟ್ಯಾಕ್ಸ್ ೧೨ ಪರ್ಸೆಂಟ್ ಇದ್ದುದನ್ನು ೧೫ ಪರ್ಸೆಂಟ್ ಮಾಡಿ ಅದನ್ನು ವಾಟರ್ ಸಪ್ಲೈ ಬೋರ್ಡಿಗೆ ಕೊಡಬೇಕು ಎಂದು ತೀರ್ಮಾನ ಮಾಡಿದರು. ಅನಂತರ ೩ ಕೋಟಿ ರೂಪಾಯಿ ಹಣವನ್ನು ಬೆಂಗಳೂರು ನಾಗರೀಕ ರಿಂದ ವಸೂಲು ಮಾಡಿ ಕೊಟ್ಟಿದ್ದಾರೆ, ಇನ್ನು ಮುಂದೆ ಈ ವಾಟರ್ ಸಪ್ಲೈ ಬೋರ್ಡ್‌ನವರು ಪ್ರತಿ ವರ್ಷ ತಮ್ಮ ಲೆಕ್ಕಪತ್ರವನ್ನು ಈ ಮನೆಯ ಮುಂದೆ ಇಡಬೇಕು ಎಂದು ಹೇಳುತ್ತೇನೆ. ಇದು ಒಂದು ಅಟಾನಮಸ್ ಬಾಡಿ ಆದರೂ ಕೂಡ ಒಂದು ಚೌಕಟಲ್ಲಿ ನಡೆಯಬೇಕು ಎಂದು ಹೇಳುತ್ತೇನೆ. ಜನತೆಯ ಹಿತದೃಷ್ಟಿಯಿಂದ ನಾನು ಈ ಮಾತನ್ನು ಹೇಳಿಲಿಕ್ಕೆ ಇಚ್ಛಿಸುತ್ತೇನೆ. ಇವೊತ್ತು ಸರ್ಕಾರ ಅಧಿಕಾರದಲ್ಲಿ ಇಲ್ಲದೇ ಹೋಗಿದ್ದರೆ, ಮೊನೆ ಡಿ.ಡಿ.ಟಿ. ಪ್ರಸಂಗ ಬಂದಾಗ ಎಲ್ಲಾ ವಾಟರ್ ಟ್ಯಾಂಕ್‌ಗಳನ್ನು ಖಾಲಿ

ಮಾಡಿಸಲಿಕ್ಕೆ ಆಗುತ್ತಿತ್ತೆ ! ಆದಕಾರಣ ಇದು ಒಂದು ಅಟಾನಮಸ್ ಬಾಡಿ ಆಗಿದ್ದರೂ ಸಹ ಇದು ಲೆಕ್ಕ ಪತ್ರಗಳನ್ನು ಈ ಸಭೆಯ ಮುಂದೆ ಪ್ರತಿ ವರ್ಷ ಇಡಬೇಕು ಎಂದು ಕೇಳಿಕೊಳ್ಳುತ್ತೇನೆ. ಮೊನ್ನೆ ಟ್ಯಾಂಕ್ ಗಳಲ್ಲಿ ನೀರು ಖಾಲಿ ಮಾಡಿದಂತಹ ಸಮಯದಲ್ಲಿ ಒಂದು ಟ್ಯಾಂಕ್‌ನಲ್ಲಿ ಒಂದು ಹೆಣ ಬಿದ್ದಿತ್ತು ಎಂದು ಬೀದಿಯಲ್ಲಿ ಜನರು ಹೇಳಿಕೊಳ್ಳುತ್ತಿದ್ದರು. ಅದನ್ನು ನಂಬುವುದಕ್ಕಾಗುತ್ತದೆಯೇ ? ಆದುದರಿಂದ ಈ ಸತ್ಯವನ್ನು ಹೊರಗೆಡವಬೇಕಾದರೆ ಒಂದು ಕಮಿಟಿ ರಚನೆ ಆಗಲೇಬೇಕು ಎಂದು ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ ಮೊನ್ನೆ ಎಲ್ಲಾ ಟ್ಯಾಂಕಿನ ನೀರನ್ನು ಖಾಲಿ ಮಾಡಿದರು, ಅದರ ವೆಚ್ಚವನ್ನೆಲ್ಲಾ ನಮ್ಮ ತಲೆ ಮೇಲೆ ಹೆಚ್ಚಿನ ದರದ ರೀತಿಯಲ್ಲಿ ಹಾಕುತ್ತಾರೆ. ಮತ್ತೆ ಈ ನೀರಿಗೆ ಓವರ್ ಕ್ಲೋರಿನ್ ಹಾಕಿದ್ದಾರೆ, ಅದಕ್ಕೆ ಈ ರೀತಿ ಆಯಿತು ಎಂದು ಹೇಳಿದರು. ನಾವು ಹತ್ತಾರು ಸಂದರ್ಭಗಳಲ್ಲಿ ಅಂಕಿಅಂಶಗಳ ಮೂಲಕ, ನಿದರ್ಶನಗಳ ಮೂಲಕ ಲೋಪದೋಷಗಳನ್ನು ತೋರಿಸಿದ್ದೇವೆ. ಆದ್ದರಿಂದ ಇಲ್ಲಿ ಹೆಚ್ಚಿನ ಲೋಪದೋಷ ನಡೆದಿದೆ. ಆದುದರಿಂದ ಈ ತಜ್ಞರ ಸಮಿತಿ ನೇಮಕ ಮಾಡಬೇಕು ಎನ್ನುವುದನ್ನು ಸರ್ಕಾರದವರು ಕಡ್ಡಾಯವಾಗಿ ಒಪ್ಪಿಕೊಳ್ಳಬೇಕು ಎಂದು ಹೇಳುತ್ತೇನೆ. ಮತ್ತು ಈ ನಿಮ್ಮ ಸರ್ಕಾರದಲ್ಲಿ ನ್ಯಾಯ ಇದ್ದ ಪಕ್ಷದಲ್ಲಿ ಈ ಹೌಸಿನ ಒಂದು ಕಮಿಟಿ ರಚನೆ ಮಾಡಿ, ಅಥವಾ ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಇದದ್ದು ಒಪ್ಪಿಸಿ ಅಥವಾ ಎಸ್ಟಿಮೇಟ್ ಕಮಿಟಿಗೆ ಒಪ್ಪಿಸಿ ಇದರ ಖರ್ಚಿನ ಬಗ್ಗೆ ನಾನು ಹೊಣೆಗಾರಿಕೆ ತೆಗೆದುಕೊಳ್ಳುತ್ತೇನೆ. ಇದನ್ನು ರುಜುವಾತು ಮಾಡುವುದಕ್ಕೆ ನಾನು ಪೂರ್ಣ ಅಂಕಿಅಂಶಗಳನ್ನು ಕೊಡುತ್ತೇನೆ. ನಾನು ಒದಗಿಸತಕ್ಕ ಸಾಕ್ಷಿ ಪೈಕಿ ಹೆಚ್ಚು ಕಡಿಮೆ ಆದಪಕ್ಷದಲ್ಲಿ ನಾನು ಎಲ್ಲಾ ತ್ಯಾಗ ಮಾಡಲಿಕ್ಕೆ ಸಿದ್ಧನಾಗಿದ್ದೇನೆ ಎಂದು ಮತ್ತೊಮ್ಮೆ ಹೇಳುತ್ತೇನೆ. ಇದನ್ನು ಬಿಟ್ಟು ಈಗ ಅನ್ಯಾಯ ಮಾಡುತ್ತಾ ಇರತಕ್ಕವರಿಗೆ ಬೆಂಬಲ ಕೊಡುತ್ತಿದ್ದೀರಿ. ನಿಮ್ಮ ಸರ್ಕಾರಕ್ಕೆ ಘನತೆ ಗೌರವಗಳು ಏನಾದರೂ ಇದ್ದರೆ ತಂದಿರತಕ್ಕ ನಿರ್ಣಯ ಒಪ್ಪಿಕೊಳ್ಳಬೇಕು. ಹಿಂದೆ ವಿಧಾನಸೌಧ ಕಟ್ಟುವಾಗ ಒಂದು ದೊಡ್ಡ ಅಪಾದನೆ ಬಂದು ಒಬ್ಬ ಅಧಿಕಾರಿ ಬಗ್ಗೆ ಸಾಕಷ್ಟು ಆರೋಪಗಳನ್ನು ಅಂಕಿ ಅಂಶಗಳ ಮೂಲಕ ತೋರಿಸಿದಾಗ ಒಂದು ಕಮಿಟಿ ಅಪಾಯಿಂಟ್ ಮಾಡಿ ಎಷ್ಟು ಖರ್ಚಾಗಿದೆ ಎಂದು ತನಿಖೆ ಮಾಡಿದರು. Government has to step in times of emergency. There is crores of rupees mis-use and mis-application of money,

SRI M. S KRISHNAN.—Once upon a time the hon. member Sri Shamanna was exploiting the good services, etc., of the Additional Secretary cum Engineer-in-Chief. The same hon. member is now taking him to task and is pressing for an enquiry. That is why the Honable Minister and the entire House must accept this Resolution.

ಶ್ರೀ ಟಿ. ಆರ್. ಶಾಮಣ್ಣ.—ನಾನು ಈ ಬಗ್ಗೆ ಹೆಚ್ಚು ಮಾತನಾಡಲಿಕ್ಕೆ ಇಷ್ಟಪಡುವುದಿಲ್ಲ. ನಾನು ತೆಗೆದುಕೊಂಡಸಂಬಂಧಿರತಕ್ಕ ನಿರ್ಣಯ ನಾಗರೀಕರ ಹಿತದೃಷ್ಟಿಯಿಂದ ಇದೆ. ಸರ್ಕಾರದ ಘನತೆ ಗೌರವ ಉಳಿಯಬೇಕು ಎನ್ನುವ ದೃಷ್ಟಿ ಯಿಂದ ಇದನ್ನು ತಾವು ಒಪ್ಪಿಕೊಳ್ಳಬೇಕು ಎಂದು ಹೇಳುತ್ತೇನೆ. ಈ ಆರೋಪವನ್ನು ತಾವು ಸುಲಭವಾಗಿ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಇನ್ನು ಹೆಚ್ಚು ಇದರ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ, ಇವೊತ್ತು ಯಾರು ಅಧಿಕಾರದಲ್ಲಿ ಇರುತ್ತಾರೆ, ಅವರು ನಾಳೆ ಹೋಗುತ್ತಾರೆ, ಆದರೆ ತಾವು ಈ ಕೆಲಸ ಮಾಡಿದರೆ ಬೆಂಗಳೂರು ನಾಗರೀಕರಿಗೆ ಶಾಶ್ವತವಾಗಿ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮುಗ್ಧಂ ಅವರು ಮರಿ ಹಿಟ್ಲರ್, ಅವರಿಗೆ ಸಹಾಯ ಮಾಡತಕ್ಕ ಇವರು ದೊಡ್ಡ ಹಿಟ್ಲರ್,

ಶ್ರೀ ಟಿ. ಆರ್. ಶಾಮಣ್ಣ.—ನಾನು ಕೊನೆಗೆ ಹೇಳುವುದೇನೆಂದರೆ, ತಜ್ಞರ ಸಮಿತಿ ಮಾಡಲಿಕ್ಕೆ ಸಾಧ್ಯವಿಲ್ಲದಿದ್ದಲ್ಲಿ; ಈ ಹೌಸ್‌ನಿಂದ ಕೂಡಿದ ಒಂದು ಕಮಿಟಿ ಮಾಡಿ, ಇಲ್ಲವೆಂದರೆ ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಕೊಡಿ, ಇಲ್ಲದ್ದರೆ ಎಸ್ಟಿಮೇಟ್ ಕಮಿಟಿಗೆ ಕೊಡಿ ಎಂದು ಕೇಳುತ್ತೇನೆ. ಆ ರೀತಿ ಮಾಡಿದರೆ ಅವರು ಅಂಕಿಅಂಶಗಳನ್ನು ಎಲ್ಲಾ ಸರಿಯಾಗಿ ಅವರೇ ತರಿಸಿಕೊಳ್ಳುತ್ತಾರೆ. ಅದು ಬಿಟ್ಟು ನೀವು ಕಳ್ಳತನ ಮಾಡುವವರಿಗೆ ಬೆಂಬಲ ಕೊಡುತ್ತೀರಿ ಎನ್ನುವ ನಿರ್ಣಯವಾಗುತ್ತದೆಂದು ಸ್ಪಷ್ಟವಾಗಿ ಹೇಳುತ್ತೇನೆ. ನಾನು ತಮ್ಮಲ್ಲಿ ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ ಸತ್ಯ, ಧರ್ಮ, ನಿಷ್ಠೆಯಿಂದ ನಾನು ಹೇಳಿದ್ದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ನನ್ನ ನಿರ್ಣಯವನ್ನು ತಾವು ಒಪ್ಪಿಕೊಳ್ಳಬೇಕು ಎಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

12-30 P. M.

MR. DEPUTY SPEAKER.—The Hon. Member has made it clear that he is not willing to withdraw his resolution. I will put the motion to the vote of the House.

The question is :

"This assembly recommends to Government to constitute an Expert Committee to study and fix up reasonable rates, for the supply of drinking and domestic use of water in Bangalore City"

The House was divided

AYES : 10

NOES : 30

The motion was negatived.

ಶ್ರೀ ಎಚ್. ಡಿ. ದೇವೇಗೌಡ.) ಈ ಸಂದರ್ಭದಲ್ಲಿ ಒಂದು ಮಾತು ಹೇಳಬೇಕಾಗುತ್ತದೆ. We are going to stage a walk out. ಈ ವಾಟರ್ ಬೋರ್ಡ್ ಸಂಬಂಧವಾಗಿ ೧೯೬೪ರಿಂದ ಪ್ರಾರಂಭವಾಗಿ ಇವತ್ತಿನವರೆಗೂ ಆಗಿರುವ ವ್ಯವಹಾರಗಳ ಬಗ್ಗೆ ಒಂದು ಕಮಿಟಿ ಮಾಡಬೇಕೆಂದು ಎಷ್ಟು ಒತ್ತಾಯಪಡಿಸಿದರೂ ಸರ್ಕಾರ ಅದಕ್ಕೆ ಒಪ್ಪದೆ ವಿಷಯಗಳನ್ನು ಬಚ್ಚಿಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೋಸ್ಕರ ನಾವು ಸಭಾತ್ಯಾಗ ಮಾಡುತ್ತೇವೆ.

(Opposition members withdraw)

Re: Appointment of a Judcial Comission to Examins and report to check corruption at all levels in Government.

SRI T. R. SHAMANNA (Fort).—With great reluctance, I have to move my following resolution :

"This Assembly recommends to Government to appoint a Judicial Commission to examine and submit a report as to how best corruption could be checked at all levels in Government, Semi-Government and Public Utility concerns and how the efficiency could be increased to enable public to get their grievances redressed promoptly and in just and equitable matter".

MR. DEPUTY SPEAKER.—Resoultion moved :

"This Assembly recommends to Government to appoint a Judicial Commission to examine and submit a report as to how best corruption could be checked at all levels in Government. Semi-Government and Public Utility Concerns and how the efficiency could be increased to enable public to get their grievances redressed promptly and in just and equitable manner."

SRI S. M. KRISHNA.—I would like the debate to be regulated. There are non-official resolutions and the Business Alvisory Committee in its wisdom depending upon importance that the House